ಜೆಎಸ್‌ಎಸ್ ಮಹಾವಿದ್ಯಾಪೀಠ, ಮೈಸೂರು
JSS MAHAVIDYAPEETHA, MYSURU

# ಜೆಎಸ್‌ಎಸ್ ವಾರ್ತಾಪತ್ರ

ಮಾಸಪತ್ರಿಕೆ

# JSS VARTHAPATHRA

Monthly Magazine

ಸಂಪುಟ 11 ಸಂಚಿಕೆ 8 ಆಗಸ್ಟ್ 2026



ಶ್ರೀಮತ್ಸುತ್ತೂರು ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠದ
ಶ್ರೀಮನ್ಮಹಾರಾಜ 'ರಾಜಗುರುತಿಲಕ'

ಪರಮಪೂಜ್ಯ ಜಗದ್ಗುರು
ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ

## 111ನೇ ಜಯಂತಿ ಮಹೋತ್ಸವ

ವಿಶೇಷ ಸಂಚಿಕೆ



ರಾಜೇಂದ್ರ ಶ್ರೀಗಳವರ ಪಟ್ಟಾಧಿಕಾರ
ಸುವರ್ಣ ಮಹೋತ್ಸವ
ಸಮಾರಂಭದಲ್ಲಿ ರಾಷ್ಟ್ರಕವಿ
ಡಾ. ಕುವೆಂಪುರವರು, ಹುಬ್ಬಳ್ಳಿ
ಮೂರುಸಾವಿರದ ಮಠದ
ಜಗದ್ಗುರುಗಳು ಮತ್ತು
ಮುಖ್ಯಮಂತ್ರಿ
ಶ್ರೀ ರಾಮಕೃಷ್ಣ ಹೆಗ್ಡೆಯವರು



ರಾಷ್ಟ್ರಕವಿ ಡಾ. ಜಿ.ಎಸ್. ಶಿವರುದ್ರಪ್ಪನವರು
ಹಾಗೂ
ಶ್ರೀ ಗಣಪತಿ ಸಚ್ಚಿದಾನಂದ
ಮಹಾಸ್ವಾಮಿಗಳೊಂದಿಗೆ
ರಾಜೇಂದ್ರ ಶ್ರೀಗಳು



ಜೆಎಸ್‌ಎಸ್ ಮಹಿಳಾ
ಮಹಾವಿದ್ಯಾಲಯದಲ್ಲಿ
ರಾಜೇಂದ್ರ ಶ್ರೀಗಳು
ಡಾ. ದೇ. ಜವರೇಗೌಡರವರು ಮತ್ತು
ಡಾ. ಶಿವರಾಮ ಕಾರಂತರು

# ಸಮಷ್ಟಿ ಕಲ್ಯಾಣ

– ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳು



ಪರಕೆ ಪರವಾಗಿರ್ದ ಪರತತ್ವಮೂರ್ತಿಯ ನಿಜ
ದಿರವೆ ರೂಪಾಗಿ, ಧರೆಯೊಳಗೆ ಚರಿಸುತಿಹ
ಪರಮ ಶ್ರೀಗುರುವೇ ಕೃಪೆಯಾಗು ॥

ಉಪಮಿಸಬಾರದ ಉಪಮಾತೀತರೂ, ಕಾಲಕರ್ಮರಹಿತರೂ, ನಿಜವನರಿದ ನಿಶ್ಚಿಂತರೂ, ಪರಮನೊಳಕೊಂಡ ಪರಿಣಾಮಿಗಳೂ ಆಗಿ, ಮಾನವಕೋಟಿಗೆ ಕಲ್ಯಾಣವನ್ನೆಸಗಿ ನಿಜಶಾಂತಿಯನ್ನು ಅನುಗ್ರಹಿಸಿದವರು ನಮ್ಮ ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರು.

ಧರ್ಮಗ್ಲಾನಿಯಾದಾಗ ಧರ್ಮಸಂಸ್ಥಾಪನೆ ಮಾಡಿ, ಜಗತ್ಕಲ್ಯಾಣವನ್ನೆಸಗಲು ಮಹಾತ್ಮರು ಹುಟ್ಟಿ ಬರುವುದು ವಿಶ್ವದ ಇತಿಹಾಸದಿಂದ ವ್ಯಕ್ತವಾಗುವುದು. ಸನಾತನ ಋಷಿಗಳು, ರೇಣುಕಾದ್ಯಾಚಾರ್ಯರು, ಏಸುಕ್ರಿಸ್ತ, ಕನ್‌ಫ್ಯೂಷಿಯಸ್, ಬುದ್ಧ, ಮಹಾವೀರ, ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರ ಭಗವತ್ಪಾದರು, ಶಂಕರ, ರಾಮಾನುಜ, ಬಸವಾದಿ ಶಿವಶರಣರು, ಮಧ್ವಾಚಾರ್ಯರು ಮೊದಲಾದ ಮಹಾನುಭಾವರು ಧರ್ಮಜಾಗೃತಿಯನ್ನುಂಟುಮಾಡಿ, ಮರ್ತ್ಯವನ್ನು ಮಹವನ್ನಾಗಿಸಲು ಮಹತ್ಪ್ರಯತ್ನ ಮಾಡಿದರು. ಅವರು ನೀಡಿದ ಮಹಾತತ್ವಗಳನ್ನು ನೆನೆದು ಅವುಗಳನ್ನು ಅನುಷ್ಠಾನದಲ್ಲಿ ತಂದು ಜೀವನವನ್ನು ಪಾವನ ಮಾಡಿಕೊಳ್ಳುವುದಕ್ಕಾಗಿ ಅವರುಗಳ ದಿವ್ಯ ಜಯಂತಿಯನ್ನು ಭಕ್ತರು ಆಚರಿಸುವರು. ಅಂತೆಯೇ ಪ್ರತಿ ವರ್ಷವೂ ಆದಿಗುರುಗಳ ಜಯಂತಿ ಮಹೋತ್ಸವವನ್ನೇರ್ಪಡಿಸಿ ಧಾರ್ಮಿಕ, ಸಾಂಸ್ಕೃತಿಕ ಕಾರ್ಯಕ್ರಮಗಳ ಮೂಲಕ ಮಹಾಜನತೆಯಲ್ಲಿ ಧರ್ಮಶ್ರದ್ಧೆಯನ್ನು ಮೂಡಿಸುತ್ತಿರುವ ಈ ಉತ್ಸವ ಸಮಿತಿಯವರ ಕಾರ್ಯ ಅಭಿನಂದನೀಯವಾದುದು.

---

ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಭಗವತ್ಪಾದರ 1020ನೆಯ ಜಯಂತಿ ಮಹೋತ್ಸವದಲ್ಲಿ ನೀಡಿದ ಸಂದೇಶ (1980)

ಭಾರತ ದೇಶವು ಧರ್ಮ ಮತ್ತು ಸಂಸ್ಕೃತಿಗೆ ವಿಖ್ಯಾತವಾದುದು. ಆದರೆ, ಅವು ಇಂದು ಮಸುಕುಮಸುಕಾಗಿವೆ. ಧರ್ಮವನ್ನು ನಿರ್ಲಕ್ಷಿಸಿದ ಮಾನವನು ನಿಜವಾದ ಸುಖ, ಶಾಂತಿಗಳನ್ನು ಹೊಂದಲಾರ. ಯಾವುದು ವಿಶ್ವವನ್ನು, ಸಕಲ ಚರಾಚರ ವಸ್ತುಗಳನ್ನು ಪೋಷಿಸಿ, ರಕ್ಷಿಸಿ ಅವುಗಳ ಸರ್ವತೋಮುಖ ಪ್ರಗತಿಗೆ ಕಾರಣವಾಗಿ, ಆತ್ಯಂತಿಕ ಕಲ್ಯಾಣವನ್ನುಂಟು ಮಾಡುವುದೋ ಅದೇ ಧರ್ಮ.

"ಯತೋಭ್ಯುದಯ ನಿಶ್ರೇಯಸಿದ್ಧಿಃ ಸ ಧರ್ಮಃ" ಎಂಬ ಮಾತು ಈ ಭಾವವನ್ನು ಸಮರ್ಥಿಸುತ್ತದೆ. ಇಲ್ಲಿ ಅಲ್ಲಿ, ಇಹಪರಗಳಲ್ಲಿ ಸಲ್ಲುವಂತಹ ಪರಿಪೂರ್ಣ ಜೀವನಕ್ಕೆ ಸಾಧಕವಾದುದೇ ಧರ್ಮ. ಇಂತಹ ಪರಿಪೂರ್ಣ ಜೀವನಕ್ಕೆ ಮಾರಕವಾದುದೇ ಅಧರ್ಮ. ಮಾನವನ ಪರಿಪೂರ್ಣ ಜೀವನಕ್ಕೆ ಅಡ್ಡಿ ಬರುವ ಆಸೆ, ಆಮಿಷ, ತಾಮಸ, ಹುಸಿ, ವಿಷಯ, ಕುಟಿಲ, ಕುಹಕ ಇತ್ಯಾದಿಗಳನ್ನು ನಿವಾರಿಸಬೇಕು. ಜೀವನು ದೇವನಾಗಲು ಪ್ರತಿಬಂಧಕಗಳಾಗಿರುವ ಆಸುರೀಪ್ರವೃತ್ತಿಯನ್ನು ನೀಗುವುದು ಮಾತ್ರವೇ ಅಲ್ಲದೆ, ದೇವನಾಗಲು ನೆರವಾಗುವ ಸತ್ಯ, ಅಹಿಂಸೆ, ಅಸ್ತೇಯ, ದಯೆ, ದಾನ ಮೊದಲಾದ ದೈವೀಗುಣಗಳನ್ನು ಹೆಚ್ಚುಹೆಚ್ಚಾಗಿ ಬೆಳೆಸಿಕೊಳ್ಳಬೇಕು.

ಭಾರತೀಯ ತತ್ತ್ವಜ್ಞಾನವು ಧರ್ಮ, ಅರ್ಥ, ಕಾಮ ಮತ್ತು ಮೋಕ್ಷ ಎಂಬ ನಾಲ್ಕು ಪುರುಷಾರ್ಥಗಳನ್ನು ಕ್ರಮವಾಗಿ ಹೇಳಿ, ಅವುಗಳಲ್ಲಿ ಧರ್ಮಕ್ಕೆ ಅಗ್ರಸ್ಥಾನವನ್ನು ಕೊಟ್ಟು ಉಳಿದ ಮೂರು ಪುರುಷಾರ್ಥಗಳೂ ಧರ್ಮಸಮ್ಮತವಾಗಬೇಕು ಎಂದು ಹೇಳುತ್ತದೆ. ಅರ್ಥವನ್ನು ಆರ್ಜಿಸಬೇಕಾದರೂ ಅದು ಧರ್ಮಕ್ಕೆ ಅನುಗುಣವಾಗಿರಬೇಕು. ಒಟ್ಟಿನಲ್ಲಿ ಭೌತಿಕ ಸಂಪತ್ತು ಆಧ್ಯಾತ್ಮಿಕ ಸಂಪತ್ತಿನೊಡನೆ ಧರ್ಮಸಮ್ಮತವಾಗಿ ಸಮರಸ ಹೊಂದಿ, ಅದರ ವಿತರಣೆಯಾದಾಗ ಮಾತ್ರ ನಿಜಸುಖ ಸಾಧ್ಯವಾಗುತ್ತದೆ.

ಆದುದರಿಂದಲೇ ಪಾಶ್ಚಾತ್ಯರು ಬೌದ್ಧಿಕ ಮತ್ತು ವೈಜ್ಞಾನಿಕ ಸಾಧನೆಗಳಿಂದ ಅಪಾರ ಭೌತಿಕ ಸಂಪತ್ತನ್ನು ಹೊಂದಿದ್ದರೂ, ಸುಖಸಂತೃಪ್ತಿಯ ಶಾಂತ ಜೀವನದಿಂದ ವಂಚಿತರಾಗಿದ್ದಾರೆ. ಆರ್ಥಿಕ ಅಸಮಾನತೆ ಅಳಿದು, ಬಡವ ಬಲ್ಲಿದರೆಂಬ ಭೇದ ತೊಲಗಿ, ಸಮಾನತೆ ನೆಲೆಸಿದಾಗ ಮಾತ್ರ ವಿಶ್ವದಲ್ಲಿ ನಿಜಶಾಂತಿ ನೆಲಸುತ್ತದೆ.

ಶ್ರೂಯತಾಂ ಧರ್ಮಸರ್ವಸ್ವಂ
ಶ್ರುತ್ವಾ, ಚೈವಾವಧಾರ್ಯತಾಂ ।
ಆತ್ಮನಃ ಪ್ರತಿಕೂಲಾನಿ
ಪರೇಷಾಂ ನ ಸಮಾಚರೇತ್ ॥

ಎಂಬ ಸನಾತನ ವಾಣಿ, 'ನಿನ್ನ ನೆರೆಹೊರೆಯವರನ್ನು ನಿನ್ನಂತೆಯೇ ಕಾಣು' ಎಂಬ ಏಸುವಿನ ನುಡಿ, ಇವುಗಳ ಭಾವದಲ್ಲಿ ಯಾವ ಅಂತರವೂ ಇಲ್ಲ. ಮೂಲಭೂತ ಅಂಶಗಳಲ್ಲಿ ಯಾವ ವ್ಯತ್ಯಾಸವೂ ಇಲ್ಲದೆ ಎಲ್ಲ ಧರ್ಮಗಳೂ ಮಾನವಕಲ್ಯಾಣಕ್ಕೆ ಸಾಧಕವಾಗಿರುವುದನ್ನು ಗಮನಿಸಬಹುದು. ಪ್ರತಿಯೊಬ್ಬ ವ್ಯಕ್ತಿಯೂ ತನ್ನ ವಿಷಯದಲ್ಲಿ ಇತರರು ಸೌಜನ್ಯ, ಸದ್ಭಾವದಿಂದ ವರ್ತಿಸಬೇಕೆಂದು ಆಶಿಸುವಂತೆಯೇ ತಾನೂ ಸಹ ಇತರರೊಡನೆ ಸೌಜನ್ಯದಿಂದ ವರ್ತಿಸಿದರೆ ಸಭ್ಯ ಸುಂದರ ಸುಸಂಸ್ಕೃತ ಸಮಾಜವು ರೂಪುಗೊಳ್ಳುವುದು.

ರಾಜಕೀಯ, ಸಾಮಾಜಿಕ, ಶೈಕ್ಷಣಿಕ ಮೊದಲಾದ ಕ್ಷೇತ್ರಗಳಲ್ಲಿಯೂ ಇಂದು ಕಂಡುಬರುವ ಅಶಾಂತಿ ಮತ್ತು ಅಶಿಸ್ತಿಗೆ ಧರ್ಮಶ್ರದ್ಧೆಯ ಅಭಾವವೇ ಕಾರಣ.

ಭಾರತ ದೇಶವನ್ನು ಪ್ರಗತಿಪಥದತ್ತ ಮುನ್ನಡೆಸಿ, ಸಮೃದ್ಧ ರಾಷ್ಟ್ರವನ್ನಾಗಿ ರೂಪಿಸಲು ನಮ್ಮ ರಾಷ್ಟ್ರನಾಯಕರು ಮತ್ತು ತಜ್ಞರು ಅನೇಕ ಯೋಜನೆಗಳನ್ನು ಹಾಕಿಕೊಂಡಿದ್ದಾರೆ. ಆದರೆ, ಇನ್ನೂ ಜನರ ಬಡತನ ಪೂರ್ಣವಾಗಿ ನಿವಾರಣೆಯಾಗಿಲ್ಲ.

ಶರಣರು ಕಾಯಕತತ್ವವನ್ನು ಅನುಷ್ಠಾನಕ್ಕೆ ತಂದು, ಎಲ್ಲ ವೃತ್ತಿಗಳೂ ಸಮಾನವಾದುವೆಂದೂ, ಅವುಗಳಲ್ಲಿ

ತರತಮಭಾವವನ್ನು ಕಲ್ಪಿಸುವುದು ಸರಿಯಲ್ಲವೆಂದೂ ಘೋಷಿಸಿದ್ದಲ್ಲದೆ ಆಚರಣೆಯಿಂದಲೂ ತಿಳಿಸಿಕೊಟ್ಟರು.

ಕೃಷಿಕೃತ್ಯ ಕಾಯಕವಾದಡೇನು?
ತನುಮನ ಬಳಲಿಸಿ ತಂದು ದಾಸೋಹವ ಮಾಡುವ
ಪರಮಸದ್ಭಕ್ತನ ಪಾದವ ತೋರಯ್ಯ ಎನಗೆ,
ಅದೆಂತೆನೆ ಆತನ ತನು ಶುದ್ಧ, ಆತನ ಮನ ಶುದ್ಧ,
ಆತನ ನಡೆ ಶುದ್ಧ, ಆತನ ನುಡಿಯೆಲ್ಲ ಪಾವನ

ಎಂಬ ಬಸವಣ್ಣನವರ ನುಡಿ ತ್ರಿಕರಣಶುದ್ಧಿಯಿಂದ ಕಾಯಕ ಮಾಡುವ ವ್ಯಕ್ತಿಯ ಹಿರಿಮೆಗೆ ಸಾಕ್ಷಿಯಾಗಿದೆ. ಸತ್ಯಶುದ್ಧ ಕಾಯಕದಲ್ಲಿ ನಿರತನಾದಾಗ ಪರವಸ್ತುವೇ ಮುಂದೆ ಬಂದರೂ ವಿಮುಖನಾಗದೆ ಕಾಯಕ ಮಾಡಬೇಕು, ಕಾಯಕವೇ ಕೈಲಾಸ' ಎಂದರುಹಿದವರು ಶರಣರು. ದೇಶದ ಬಡತನದ ನಿವಾರಣೆಗೆ ತ್ರಿಕರಣಪೂರ್ವಕವಾಗಿ ಮಾಡುವ ಸತ್ಯಶುದ್ಧ ಕಾಯಕವೇ ತಾರಕಮಂತ್ರ.

ಆಧುನಿಕ ಶಿಕ್ಷಣಕ್ರಮದಲ್ಲಿ ತಜ್ಞರು ಅನೇಕ ಸುಧಾರಣೆಗಳನ್ನು ಮಾಡಿದ್ದರೂ ಅದರಲ್ಲಿ ಇನ್ನೂ ಕೆಲವು ಅಂಶಗಳನ್ನು ಸಂಯೋಜಿಸಬೇಕಾಗಿದೆ. ಪ್ರಸಕ್ತ ವಿದ್ಯಾಭ್ಯಾಸ ಕ್ರಮದಲ್ಲಿ ನೈತಿಕ ಮೌಲ್ಯಗಳಿಗೆ ಅವಕಾಶ ಕಲ್ಪಿಸಿ, ಉದ್ಯೋಗಪ್ರಧಾನವಾದ ಶಿಕ್ಷಣವನ್ನು ರೂಪಿಸಬೇಕು. ಇದರಿಂದ ನೈತಿಕ ಮೌಲ್ಯದ ಮಾಹಿತಿಯನ್ನರಿತು ಶಿಸ್ತು, ಸಂಯಮ, ಸಚ್ಚಾರಿತ್ರ್ಯದಿಂದ ಕೂಡಿದ ವಿದ್ಯಾರ್ಥಿಗಳು ತಮ್ಮ ಶಿಕ್ಷಣದ ನಂತರ ಸ್ವಾವಲಂಬಿಗಳಾಗಿ, ಉದ್ಯೋಗಶೀಲರಾಗಿ ಸತ್ಪ್ರಜೆಗಳಾಗಲು ಸಹಾಯವಾಗುತ್ತದೆ. ಗುರುಶಿಷ್ಯ ಸಂಬಂಧವೂ ಉತ್ತಮವಾಗುವುದು. ಇಂದಿನ ವಿದ್ಯಾರ್ಥಿಗಳು ನಮ್ಮ ನಾಡಿನ ಸಂಸ್ಕೃತಿ ಮತ್ತು ಮಹತ್ವವನ್ನು ಅರಿತು, ತಮ್ಮ ಶ್ರೇಯಸ್ಸನ್ನು ಸಾಧಿಸಿಕೊಳ್ಳಲು ದಯಾಮಯರಾದ ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರ ಭಗವತ್ಪಾದರು ಕರುಣಿಸಲಿ.

ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರ ಭಗವತ್ಪಾದರ ಪವಿತ್ರ ಹೆಸರಿನಲ್ಲಿ ಸಂಸ್ಥಾಪಿಸಲ್ಪಟ್ಟಿರುವ ವಿದ್ಯಾಕ್ಷೇತ್ರಗಳು, ಪ್ರಸಾದನಿಲಯಗಳು, ಧಾರ್ಮಿಕ ಕಾರ್ಯಗಳು ಇವುಗಳನ್ನು ನೀವು ಬಿನ್ನವತ್ತಳೆಯಲ್ಲಿ ಶ್ರದ್ಧಾಭಕ್ತಿಗಳಿಂದ ಪ್ರಶಂಸಿಸಿರುವಿರಿ. ಈ ಸಂಸ್ಥೆಗಳ ಮೂಲಕ ಮಹಾಜನತೆಯ ಅಭ್ಯುದಯವಾಗಲು ಆದಿ ಶ್ರೀ ಗುರುವರ್ಯರ ಕೃಪೆಯೇ ಕಾರಣ. 'ತೇನ ವಿನಾ ತೃಣಮಪಿ ನ ಚಲತಿ'. ಶ್ರೀ ಗುರುಕೃಪೆಯಿಂದ ನಿಮಿತ್ತ ಮಾತ್ರವಾಗಿ ಸೇವೆ ಮಾಡುವ ಸದವಕಾಶ ಲಭಿಸಿದುದಕ್ಕೆ ಸಂತಸ ಪಡುತ್ತೇವೆ. ಈ ಸೇವಾಕಾರ್ಯಗಳಿಗೆ ಅಭಿಮಾನಿಗಳಾದ ಮಹಾಜನತೆ ಮತ್ತು ಸರ್ಕಾರ ನೀಡಿರುವ ಸಹಾಯ, ಸಹಕಾರಗಳನ್ನು ವಿಶ್ವಾಸದಿಂದ ಸ್ಮರಿಸುತ್ತೇವೆ. ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರ ಭಗವತ್ಪಾದರು ಸರ್ವರಿಗೂ ಸಂತೃಪ್ತಿ, ಶಾಂತಿ ಮತ್ತು ಆನಂದವನ್ನು ಅನುಗ್ರಹಿಸಲೆಂದು ಹಾರೈಸಿ ವಿರಮಿಸುತ್ತೇವೆ.

ಲೋಕಾಸ್ಸಮಸ್ತಾಸ್ಸುಖಿನೋ ಭವಂತು.

## ಊರುಗೋಲು

- ಸಿ.ಪಿ.ಕೆ.

ಕೃಶಕಾಯ; ಕಾಯಕಕ್ಕೆ ಬರೆದ ಮಹಾಭಾಷ್ಯ!
ಆಯುಷ್ಯದ ಬಗೆಗೆ ಚಿಂತಿಸದೆ, ಸಮಾಜದುತ್ಥಾನ
ಚಿಂತೆಯನೆ ಹಗಲಿರುಳು ಹಾಸುಹೊದಿಕೆಯ ಮಾಡಿ,
ದಾಸೋಹಧನ್ಯರಾದವರು ಶ್ರೀ ಶಿವರಾತ್ರಿ
ರಾಜೇಂದ್ರ ಪೂಜನೀಯರು! ದಿವ್ಯದ ಬೀಜ
ಬಿತ್ತಿ ಭೂಜವ ಬೆಳೆದವರು, ಹೊಳೆಗೆ ಚಿನ್ಮೂಲ-
ವಾದವರು, ಭವಕ್ಕೆ ಶಿವದೂರುಗೋಲಾಗಿ,
ಶಿಶುವಾಗಿ, ಅಂತೆ ತಾಯೂ ಆಗಿ, ಸುತ್ತೂರ-
ನೆತ್ತರಕೆ ಒಯ್ದವರು! ನೆತ್ತರಿನ ಕಣಕಣವೂ
ಕಿರಣವಾಗಿತ್ತು ಲಿಂಗದ! ಅಂಗ ಕರಗಿತ್ತು
ಕಪ್ಪಿರದ ಕಪ್ಪುರವಾಗಿ ಹರಡಿ ನರುಬೆಳಕ!
ಅವತಾರ, ಅಂಶಾವತಾರಗಳು ಕಾಲಾತೀತ;
ವಿಭೂತಿಪುರುಷರಿಂಥವರು ದೇವರ ನೆರಳು;
ಜೀವಾವಳಿಯ ಲೇಸಿಗೆಳಸಿ ತುಡಿಯುವ ಕರುಳು!



# ಚಿಂತನೆಯ ಕಾಮಧೇನು

*ನಿ.ಪ್ರ.ಸ್ವ. ಶ್ರೀ ಮುಮ್ಮಡಿ ನಿರ್ವಾಣ ಮಹಾಸ್ವಾಮಿಗಳು*
*ಶ್ರೀ ದೇಗುಲಮಠ, ಕನಕಪುರ, ರಾಮನಗರ ಜಿಲ್ಲೆ*

**ಪ್ರ**ಪಂಚದ ಇತಿಹಾಸದ ಹಿನ್ನೆಲೆಯಲ್ಲಿ ಕ್ರಿಯಾಶೀಲವಾಗಿ ಚಿಂತಿಸಿ ಮಂಥನಗೈದರೆ 'ಭರತಖಂಡ' ವಿಶ್ವವಂದನಾರ್ಹವಾದುದು. ದಯೆ, ಕರುಣೆ, ಅಂತಃಕರಣ, ಸನ್ಮಾರ್ಗ ಚಿಂತನೆ, ಪರರ ಕ್ಷೇಮ, ಸಮಾಜಸೇವೆ, ಧರ್ಮ, ನ್ಯಾಯ, ನೀತಿ, ನಿರಹಂಕಾರ, ನಿರ್ಬಲ ರಕ್ಷಣೆ ಹಾಗೂ ಒಳಿತು ಎಂದು ದೊರೆಯುವ ಪ್ರಪಂಚದ ಅನೇಕವೆಲ್ಲದ್ದಕ್ಕೂ ನಮ್ಮ ಭರತಖಂಡವೇ ಮೂಲವಾಗಿದೆ ಎಂದರೆ ಅತಿಶಯೋಕ್ತಿಯಾಗಲಾರದು.

ಇಂತಹ ನೆಲೆಯಲ್ಲಿ ಭಾರತದ ವಿಶ್ವಖ್ಯಾತಿಗೆ ಒತ್ತುಕೊಟ್ಟಂತೆ ಕೆಲಸ ನಿರ್ವಹಿಸಿ ಅನೇಕ ಧರ್ಮಗಳ ಸಾರಸತ್ವವನ್ನು 'ದಯೆ' ಎಂಬ ಎರಡಕ್ಷರದಲ್ಲಿ ಹುದುಗಿಸಿ 'ದಯೆಯೇ ಧರ್ಮದ ಮೂಲವಯ್ಯಾ' ಎಂದು ಎಲ್ಲಾ ಧರ್ಮಗಳ ಸಾರವನ್ನು ಕೇಂದ್ರೀಕರಿಸಿ ನಿಂತ ಕನ್ನಡನಾಡು ಪುಟ್ಟ ಪ್ರಪಂಚದಂತಿರುವ ಭಾರತದಲ್ಲಿ ಒಂದು ಪುಟ್ಟ ಭಾರತವಾಗಿ ಹೊರಹೊಮ್ಮಿತ್ತು. ಇಂತಹ ಸರ್ವಗುಣಸಂಪನ್ನತೆಗೆ ಬೆನ್ನೆಲುಬಾಗಿ ನಿಂತವುಗಳೇ ಮಠಗಳು–ಮಂದಿರಗಳು, ದೇವಾಲಯಗಳು, ಸಾಧು-ಸಂತರುಗಳು ಹಾಗೂ ಸಮಾಜಮುಖಿ ಸೇವಾತತ್ಪರರು.

ಈ ನಿಟ್ಟಿನಲ್ಲಿ ಸಾವಿರಾರು ವರ್ಷಗಳ ಸುದೀರ್ಘ ಇತಿಹಾಸ ಹೊಂದಿರುವ ಮಠಗಳಲ್ಲಿ ಶ್ರೀಮತ್ಸುತ್ತೂರು ವೀರಸಿಂಹಾಸನ ಮಠವೂ ಒಂದು. ಮೈಸೂರು ಜಿಲ್ಲೆಯ ಕಪಿಲಾನದಿ ದಂಡೆಯ ಪ್ರಶಾಂತ ಪರಿಸರದಲ್ಲಿ ನೆಲೆಗೊಂಡು ಸದಾ ಶಾಂತಿಮಂತ್ರದೊಂದಿಗೆ ಸಮಾಜದ ಸರ್ವತೋಮುಖ ಪ್ರಗತಿಗೆ ಚಿಂತಿಸುತ್ತಾ ಇಂದು ವಿಶ್ವಖ್ಯಾತಿಯ ಪುಷ್ಪಮಾಲೆಯಲ್ಲಿ ಕೇಂದ್ರಬಿಂದುವಿನಂತೆ ದಾಪುಗಾಲು ಹಾಕುತ್ತಿರುವ ಸುಪ್ರಸಿದ್ಧ 'ವೀರಸಿಂಹಾಸನ ಮಠ'. ಶ್ರೀಮಠದ ಗುರುಪರಂಪರೆಯ ಪೀಠವನ್ನು ಅಲಂಕರಿಸಿದ ಗುರುವರೇಣ್ಯರೂ, ಸದಾ ಹಸನ್ಮುಖಿಗಳಾಗಿ ಶಿವಲೀಲಾಮೃತದೊಂದಿಗೆ ಸಮಾಜಮುಖಿ ಕಾರ್ಯಗಳನ್ನು ಕೈಗೊಂಡು ಸರ್ವತೋಮುಖ ಅಭಿವೃದ್ಧಿಗೆ ಕಾಳಜಿಯಿತ್ತು, ಬಡವ-ಬಲ್ಲಿದನೆಂಬ ಭೇದವೆಣಿಸದೆ ಎಲ್ಲರಿಗೂ, ಎಲ್ಲಾ ಕಾಲದಲ್ಲಿಯೂ ಒಳಿತನ್ನೇ ಬಯಸಿದವರು. ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಭಗವತ್ಪಾದರಿಂದ ಇಂದಿಗೂ ಸರ್ವವಿಧಿತವಾದುದೆಂದೇ ನಾವು ಭಾವಿಸಬೇಕು.

ಈ ಹಿನ್ನೆಲೆಯಲ್ಲಿ ಶ್ರೀಮತ್ಸುತ್ತೂರು ವೀರಸಿಂಹಾಸನದಲ್ಲಿ ಧರ್ಮದ ಪ್ರತಿರೂಪದಂತೆ ವಿರಾಜಮಾನರಾಗಿ ಅಲಂಕರಿಸಿದ ಇಪ್ಪತ್ಮೂರನೇ ಗುರುವರ್ಯರೇ ಶ್ರೀಮತ್ಸುತ್ತೂರು ವೀರಸಿಂಹಾಸನಾ ಧೀಶ್ವರ ಪರಮಪೂಜನೀಯ ಜಗದ್ಗುರು ಶ್ರೀ ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು. ಅನೇಕ ವರ್ಷಗಳಿಂದ ಸುಪ್ತವಾಗಿ – ಅಗೋಚರವಾಗಿ ಬೆಳೆದುನಿಂತ ಕಲ್ಪವೃಕ್ಷ ಒಂದೇ ಬಾರಿಗೆ ಜನರ ಆಶೋತ್ತರಗಳನ್ನು ಈಡೇರಿಸುವಂತೆ ಕಾಣಿಸಿಕೊಂಡು ಸಾವಿರಾರು ಭಕ್ತರ ಅಭೀಪ್ಸೆಯ ಆಗರವಾದರು. ಅಂದಿನ ಸ್ಥಿತಿಯಲ್ಲಿ ಧರ್ಮಕಾರ್ಯವೊಂದನ್ನೇ ನಿರ್ವಹಿಸದೆ ಶಿಕ್ಷಣ-ದಾಸೋಹಕ್ಕೆ ಹೆಚ್ಚಿನ ಒತ್ತುಕೊಟ್ಟು, ಈ ನಾಡಿನ ಬಡತನ ನಿರ್ಮೂಲನಕ್ಕೆ ಶಿಕ್ಷಣವೇ ಮೂಲ ಮಂತ್ರವೆಂದು ಭಾವಿಸಿ ಶಿಕ್ಷಣ ಕೇಂದ್ರಗಳು, ಜೊತೆಯಲ್ಲಿ ದಾಸೋಹ ವನ್ನು ಪ್ರಾರಂಭಿಸಿದ ಮಹಾನ್ ತೇಜೋಮೂರ್ತಿಗಳು.

ಇಂತಹ ತೇಜೋಮೂರ್ತಿಗಳವರ ಒಡನಾಟದಲ್ಲಿ ಕಂಡು ಉಂಡ ವಿಚಾರಗಳು ನಮ್ಮ ಹೃದಯದ ಅಂತರಾಳದಲ್ಲಿವೆ. ಈ ಒಂದು ಸುಸಂದರ್ಭದಲ್ಲಿ ಅವುಗಳನ್ನು ಸ್ಮರಿಸಿಕೊಳ್ಳುವಂತಾಗಿದೆ.

## ಮಮತೆಯ ಕಲ್ಪವೃಕ್ಷ

ಪರಮಪೂಜ್ಯ ಶ್ರೀ ಶ್ರೀ ಶಿವರಾತ್ರಿ ರಾಜೇಂದ್ರ

* ಘನ–ಮನ ಕೃತಿಯಿಂದ

ಮಹಾಸ್ವಾಮಿ ಗಳವರನ್ನು ನಾವು ವಿದ್ಯಾರ್ಥಿದೆಸೆಯಿಂದಲೇ ಬಹಳ ಹತ್ತಿರದಿಂದ ಕಂಡವರು. ಅದರಲ್ಲಿಯೂ ಮೊದಲನೇ ಬಾರಿಗೆ ಅವರ ದರ್ಶನಾಭಿ ಲಾಶೆಯಾಗಿ ಬಂದದ್ದು ಶಾರದವಿಲಾಸ ಕಾಲೇಜ್‌ನಲ್ಲಿ ಪ್ರಥಮ ಪಿ.ಯು.ಗೆ ಸೇರಿದಾಗ. ಪ್ರೌಢ ಶಿಕ್ಷಣವನ್ನು ಚಾಮರಾಜನಗರ ತಾಲ್ಲೂಕು ಮರಿಯಾಲ ಮಠದಲ್ಲಿದ್ದುಕೊಂಡೇ ಚಾಮರಾಜನಗರ ಮುನಿಸಿಪಲ್ ಪ್ರೌಢಶಾಲೆಯಲ್ಲಿ ಎಸ್‌ಎಸ್‌ಎಲ್‌ಸಿ ಮುಗಿಸಿ ಹೆಚ್ಚಿನ ವಿದ್ಯಾಭ್ಯಾಸಕ್ಕೆ ಮೈಸೂರಿಗೆ ಬಂದರೂ ವಸತಿ ಮತ್ತು ಊಟದ ವ್ಯವಸ್ಥೆ ನಮ್ಮನ್ನು ಕಾಡುತ್ತಿತ್ತು. ಈ ಒಂದು ಸಂದರ್ಭದಲ್ಲಿ ಮರಿಯಾಲ ಮಠದ ಪೂಜ್ಯಶ್ರೀ ಸದಾಶಿವಸ್ವಾಮಿಗಳವರು ನೀಡಿದ ಶಿಫಾರಸ್ಸು ಪತ್ರವನ್ನು ಪಡೆದು ಮೈಸೂರಿಗೆ ಬಂದು ದರ್ಶನ ಪಡೆದು ಪೂಜ್ಯ ಜಗದ್ಗುರುಗಳವರಿಗೆ ನಮಸ್ಕರಿಸಿ ಶಿಫಾರಸ್ಸು ಪತ್ರವನ್ನು ಅವರ ಕೈಗಿತ್ತಾಗ ಏನೊಂದನ್ನೂ ವಿಚಾರಿಸದೆ ಅದೇ ಪತ್ರದ ಮೇಲೆ 'ಈತನಿಗೆ ವಸತಿ-ಪ್ರಸಾದದ ವ್ಯವಸ್ಥೆ ಕಲ್ಪಿಸುವುದು' ಎಂದು ಬರೆದು ಚೆನ್ನಾಗಿ ಓದು ಮಗು ಎಂದು ಹರಸಿ ಮೇನೇಜರ್ ಗುರುಮೂರ್ತಿಯವರನ್ನು ಕಾಣು ಎಂದು ಕಳುಹಿಸಿದ ಸಂದರ್ಭ ಇಂದಿಗೂ ಕಣ್ಮುಂದೆ ಸುಳಿದಂತಾಗುತ್ತದೆ. ಆ ಒಂದು ಸಮಯದಲ್ಲಿ ನಮ್ಮ ಮನಸ್ಸಿನ ಭಾವನೆಗಳು ಗರಿಬಿಚ್ಚಿ ಅಬ್ಬಾ! ಎಂಥ ಉದಾರತೆ! ಎಂಥ ನಿರ್ಮಲ ಮನಸ್ಸು! ಎಂಥ ಮುಗ್ಧತೆ, ಅಂದು ಪ್ರಾರಂಭವಾದ ಪೂಜ್ಯರ ಒಡನಾಟ ಇಂದಿಗೂ ನಮ್ಮ ಹೃದಯವನ್ನು ಹಗುರವನ್ನಾಗಿಸುತ್ತದೆ.

### ಚಿಂತನೆಯ ಕಾಮಧೇನು

ಇದೊಂದು ಆಂತರಿಕ ನೋವಿನ ಸಂದರ್ಭ. ಮೊದಲಬಾರಿಗೆ ಜಗದ್ಗುರುಗಳವರನ್ನು ದರ್ಶಿಸಿದಾಗ ವಸತಿ-ಪ್ರಸಾದದ ವ್ಯವಸ್ಥೆ ಕಲ್ಪಿಸಿ ಕಷ್ಟಪಟ್ಟು ಓದು ಎಂದು ಹರಸಿ ಕಳುಹಿಸಿದರೂ ಆಂಗ್ಲಮಾಧ್ಯಮವಾದ ಪಿ.ಯು.ಸಿ. (ಪಿಸಿಎಂಬಿ) ಕಷ್ಟಪಟ್ಟು ಅಭ್ಯಾಸ ಮಾಡಿದರೂ ಅನುತ್ತೀರ್ಣನಾಗುವಂತಾಯಿತು. ಆದರೆ ಮತ್ತೆ ವ್ಯಾಸಂಗವನ್ನು ಮುಂದುವರಿಸುವ ಆಸೆ ಕಮರದೆ ಮತ್ತೊಮ್ಮೆ ಪೂಜ್ಯ ಶ್ರೀ ಸದಾಶಿವ ಮಹಾಸ್ವಾಮಿಗಳನ್ನು ಮೊರೆಹೊಕ್ಕುವಂತಾಯಿತು. ಪೂಜ್ಯ ಶ್ರೀ ಸದಾಶಿವ ಮಹಾಸ್ವಾಮಿಗಳು ಮತ್ತೊಂದು ಶಿಫಾರಸ್ಸು ಪತ್ರವನ್ನು ಕೈಗಿತ್ತು 'ಕ್ಯಾತನಹಳ್ಳಿ ಶ್ರೀಗಳವರು ಹತ್ತಿರವಿರುವಾಗ ಈ ಪತ್ರ ಕೊಡಬೇಡ ಏಕೆಂದರೆ ನೀನು ಫೇಲಾಗಿದ್ದಿಯಾ. ಅವರೇನಾದರೂ ಜಗದ್ಗುರುಗಳ ಎದುರಿಗೆ ಫೇಲಾದವರಿಗೆ ಸೀಟು ಕೊಡುವುದಕ್ಕಾಗುವು ದಿಲ್ಲ ಎಂದು ಹೇಳಿದರೆ ಜಗದ್ಗುರುಗಳು ಆಗುವುದಿಲ್ಲ ಎನ್ನಬಹುದು. ಆದ್ದರಿಂದ ಒಬ್ಬರೆ ಇರುವಾಗ ಕೊಡು' ಎಂದು ಕಿವಿಮಾತು ಹೇಳಿ ಕಳುಹಿಸಿಕೊಟ್ಟರು. ಆದರೆ ಈ ದಿನ ತಾಳ್ಮೆಗೆ ಬೆಲೆ ಕಟ್ಟುವ ದಿನ ವಾಯಿತು. ಶ್ರೀ ಶ್ರೀ ರಾಜೇಂದ್ರ ಮಹಾಸ್ವಾಮಿಗಳವರು ಒಬ್ಬರೇ ಇರುವಂತಾದದ್ದು ನಾವು ಕಾದ ಒಂದೂವರೆದಿನದ ನಂತರ. ಏಕೆಂದರೆ ಕ್ಯಾತನಹಳ್ಳಿ ಶ್ರೀಗಳವರು ಜಗದ್ಗುರುಗಳವರನ್ನು ಬಿಟ್ಟು ಕದಲಲೇ ಇಲ್ಲ. ಯಾವುದೋ ಒಂದು ಕಾರಣಕ್ಕಾಗಿ ಕ್ಯಾತನಹಳ್ಳಿ ಶ್ರೀಗಳು ಒಳಗೆ ಹೋದಾಗ ಅದೇ ಸಂದರ್ಭ ಸುಸಂದರ್ಭವಾಗಿ ಕಂಡು ನೇರವಾಗಿ ಒಳಗೆ ಹೋಗಿ ಶ್ರೀಗಳವರಿಗೆ ನಮಸ್ಕರಿಸಿ ಪತ್ರವನ್ನು ಕೈಗಿತ್ತು ಮೌನಿಯಾದೆ. ಜಗದ್ಗುರುಗಳವರು ಕತ್ತೆತ್ತಿಯೂ ನೋಡದೆ ಅನುತ್ತೀರ್ಣವಾಗಿರುವ ಬಗ್ಗೆ ವಿಚಾರಿಸದೆ ಮೌನದಿಂದಲೇ ಈತನಿಗೆ ಪರೀಕ್ಷೆ ಮುಗಿಯುವವರೆಗೂ ವಸತಿ-ಪ್ರಸಾದದ ವ್ಯವಸ್ಥೆ ಕಲ್ಪಿಸುವುದು ಎಂದು ಬರೆದು ಚೆನ್ನಾಗಿ ಓದೋ, ಎಂದೂ ಹೇಳಿ ಮೇನೇಜರ್ ಗುರುಮೂರ್ತಿಯನ್ನು ಕಾಣು ಎಂದರು.

ಶ್ರೀಗಳವರನ್ನು ಕಾಣುವವರೆಗೂ, ಕಂಡಮೇಲೆ ನನ್ನ ಬಗ್ಗೆ ಇರುವ ಅಭಿಪ್ರಾಯಗಳ ಬಗ್ಗೆ ನಮ್ಮ ಹೃದಯದ ಅಂತರಾಳದಲ್ಲಿ ಇದ್ದುದೇ ಬೇರೆ, ಆದರೆ ಸನ್ನಿಧಿಯಲ್ಲಿ ನಡೆದದ್ದೇ ಬೇರೆ. ಏಕೆಂದರೆ ಗ್ರಾಮೀಣ ಪ್ರದೇಶದ ಮಕ್ಕಳ ಅದರಲ್ಲಿಯೂ ಆಂಗ್ಲ ಮಾಧ್ಯಮದ ಶಿಕ್ಷಣ ಕಬ್ಬಿಣದ ಕಡಲೆ ಎಂಬುದು ಶ್ರೀಗಳವರಿಗೆ ಮನವರಿಕೆಯಾಗಿತ್ತು.

ಇಂತಹ ಹತ್ತು-ಹಲವು ಸಂದರ್ಭಗಳು ನಮ್ಮ ಜೀವನದಲ್ಲಿ ಹಾಸುಹೊಕ್ಕಾಗಿವೆ. ನೆನಪು ಗರಿಬಿಚ್ಚಿದರೆ ಬರೆಯಲು ಸಮಯವೇ ಇಲ್ಲದಾಗುತ್ತದೆ. ಅಂತಹ ದಿವ್ಯ ತೇಜೋಮೂರ್ತಿಯ ಒಡನಾಟದಲ್ಲಿ ನಾವೂ ಹಾಸುಹೊಕ್ಕಾಗಿದ್ದೇವೆ ಎಂಬ ಆಹ್ಲಾದಕರ ಸಂಗತಿ ನಮಗೆ ಹರ್ಷ ತಂದಿದೆ. ಅಂತೆಯೇ ಇಂದಿನ ಜಗದ್ಗುರು ಶ್ರೀ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು ಕೂಡ ನಮ್ಮ ಮೇಲೆ ಕರುಣೆ ಇಟ್ಟು ಆಶ್ರಯದಾತರಾಗಿ ಮಾರ್ಗದರ್ಶಕರಾಗಿದ್ದಾರೆ.



# ನನ್ನ ಖ್ಯಾತಿಗೆ ಕಾರಣರಾದವರು

ನಿ.ಪ್ರ.ಸ್ವ. ಶ್ರೀ ಚಿದಾನಂದಸ್ವಾಮಿಗಳು
ಶ್ರೀ ಹೊಸ ಮಠ, ಮೈಸೂರು

**ಪ**ರಮಪೂಜ್ಯ ಲಿಂಗೈಕ್ಯ ಜಗದ್ಗುರು ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರನ್ನು ಸ್ಮರಿಸಿ ನೆನಪಿಗೆ ತಂದುಕೊಳ್ಳುವುದೇ ಒಂದು ದಿವ್ಯಾನುಭೂತಿ. ಪ್ರೀತಿ, ವಾತ್ಸಲ್ಯ ಮತ್ತು ಮಾನವೀಯ ಗುಣಗಳ ಸಾಕಾರರೂಪವಾಗಿದ್ದ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಚೈತನ್ಯದ ಸುಳಿಗೆ 1970-71 ರಲ್ಲಿ ಸಿಲುಕಿದ್ದೇ ನನ್ನ ಜೀವನದ ಮಹಾನ್ ತಿರುವಿಗೆ ಕಾರಣೀಭೂತವಾಯಿತು. ಆ ಮಹಾನ್ ಶಕ್ತಿಯ ಪ್ರೀತಿ ಮತ್ತು ಅನುಕಂಪದ ಪರಿಣಾಮವಾಗಿ ನಾನಿಂದು ಏನು ಆಗಿದ್ದೇನೆಯೋ ಅದು ಸಾಧ್ಯವಾಯಿತು. ಅವರು ಹಾಗೆ ತೋರಿಸಿದ ಸನ್ಮಾರ್ಗದಲ್ಲೇ ಸಾಗಿದ್ದರಿಂದ ಇಂದು ಗುರು ಪೀಠಾಧಿಕಾರಿಯಾಗಿ ಮುನ್ನಡೆಯಲು ಸಾಧ್ಯವಾಗಿದೆ. ನಾನು ಅವರನ್ನು ಮೊದಲು ಭೇಟಿಯಾದುದು ಒಂದು ಆಕಸ್ಮಿಕವೇ. ಆ ಭೇಟಿಯ ಪರಿಣಾಮವಾಗಿ ನನ್ನ ಜೀವನದಲ್ಲಿ ಸಾಧನೆಗಳ ಪುಟಗಳು ತೆರೆಯುವಂತಾಯಿತು. ನಮ್ಮ ಶ್ರೀ ನಟರಾಜ ಪ್ರತಿಷ್ಠಾನವನ್ನು ಸಂಸ್ಥಾಪಿಸಿ ಅದರ ಮೂಲಕ ನಾನು ಇಂತಿಷ್ಟು ಸೇವೆಗೈಯ್ಯುತ್ತಿರುವುದಕ್ಕೂ ಪ್ರೇರಣೆ ನೀಡಿದವರಲ್ಲಿ ಪ್ರಮುಖರು. ಇದರ ಹಿಂದೆ ಪೂಜ್ಯರ ಆದರ್ಶಗಳು ಮತ್ತು ಸದ್ಬೋಧನೆಗಳು ಮೂಲ ದ್ರವ್ಯವೆಂದು ನಾನು ಇಂದಿಗೂ ಭಾವಿಸಿದ್ದೇನೆ. ದಾಸೋಹ ತತ್ವವನ್ನು ಆಚರಣೆಗೆ ತರುವುದರ ಜೊತೆಗೆ ವ್ಯಕ್ತಿಯ ಜೀವನವನ್ನೇ ಪಾವನವನ್ನಾಗಿಸುವ ವಿದ್ಯಾದಾನದಲ್ಲಿ ನನ್ನನ್ನು ನಾನು ತೊಡಗಿಸಿಕೊಳ್ಳಲು ಪೂಜ್ಯರು ಕಾರಣವಾಗಿದ್ದಾರೆ.

ಅವರ ನನ್ನ ಮೊದಲ ಆಕಸ್ಮಿಕ ಭೇಟಿಯ ತರುವಾಯ ಅವರೊಂದಿಗಿದ್ದ ಸಂದರ್ಭಗಳು ಮತ್ತು ಘಟನಾವಳಿಗಳು ನನ್ನ ಬದುಕನ್ನು ಆಧ್ಯಾತ್ಮಿಕತೆಯ ದಿಕ್ಕಿಗೆ ತಿರುಗಿಸಿತೆಂದೂ ಧನ್ಯತಾ ಭಾವದಿಂದ ಇಂದಿಗೂ ನೆನಪಿನಲ್ಲಿಟ್ಟುಕೊಂಡಿದ್ದೇನೆ. ಶ್ರೀ ಕುಂದೂರು ಮಠದ ಶ್ರೀ ಶಿವಬಸವಸ್ವಾಮಿಗಳನ್ನು ಯಾವುದೋ ಕಾರ್ಯನಿಮಿತ್ತ ನಮ್ಮ ಹಿರಿಯ ಗುರುಗಳ ಆದೇಶದಂತೆ ನಾನು ನೋಡಬೇಕಾಗಿತ್ತು. ನಾನು ಹಾಗೆ ಅವರನ್ನು ಕಾಣಲು ಹೋದ ಸಮಯದಲ್ಲಿ ಅವರು ಪರಮ ಪೂಜ್ಯ ಶ್ರೀ ಜಗದ್ಗುರುಗಳ ಬಳಿ ಮಾತನಾಡುತ್ತಿದ್ದರು. ನಾನು ಈರ್ವರು ಪೂಜ್ಯರುಗಳಿಗೂ ಭಕ್ತಿಯಿಂದ ನಮಿಸಿದಾಗ ಕುಂದೂರು ಶ್ರೀಗಳು ನನ್ನ ಪರಿಚಯವನ್ನು ಪೂಜ್ಯ ಜಗದ್ಗುರುಗಳಿಗೆ ಮಾಡಿಕೊಟ್ಟರು. ಶ್ರೀ ಹೊಸಮಠದ ಗುರುಶಾಂತಸ್ವಾಮಿಗಳವರ ಅಣ್ಣನ ಮಗ ನಾನೆಂದು ಪೂಜ್ಯರಿಗೆ ಪರಿಚಯಿಸಿದಾಗ ಅವರು ಅತ್ಯಂತ ಸಂತೋಷಪಟ್ಟರು. ನಗುಮುಖದಿಂದಲೇ ನನ್ನ ಇತ್ಯೋಪರಿಯನ್ನು ಕೇಳಿ ತಿಳಿದುಕೊಂಡರು. ಆಗ ಕುಂದೂರು ಶ್ರೀಗಳವರೆ ನಾನು ಬಿ.ಎ. ಪರೀಕ್ಷೆಯಲ್ಲಿ ಅನುತ್ತೀರ್ಣನಾಗಿದ್ದನ್ನು ಮತ್ತು ಸಪ್ಲಿಮೆಂಟರಿ ಪರೀಕ್ಷೆಯನ್ನು ಕಟ್ಟಿರುವ ಸಂಗತಿಯನ್ನು ಪೂಜ್ಯರಿಗೆ ತಿಳಿಸಿದರು. ಆಗ ನನ್ನ ಮನಸ್ಥಿತಿಯನ್ನು ಅರಿತುಕೊಂಡ ಪೂಜ್ಯರು ಮತ್ತೊಮ್ಮೆ ಚೆನ್ನಾಗಿ ಓದಿ ಪರೀಕ್ಷೆಯನ್ನು ತೆಗೆದುಕೊಳ್ಳಲು ಪ್ರೋತ್ಸಾಹದಾಯಕ ಮಾತುಗಳನ್ನಾಡಿದ್ದು ನನಗೆ ಈಗಲೂ ನೆನಪಿನಲ್ಲಿದೆ. ಹೀಗೆ ಪೂಜ್ಯರ ಗಮನಕ್ಕೆ ಬಂದ ನಂತರ ನನ್ನ ಬದುಕು ಒಂದು ಅರ್ಥದಲ್ಲಿ ಜವಾಬ್ದಾರಿಯನ್ನು ಹೊರುವ ದಿಕ್ಕಿಗೆ ತಿರುಗಿತು. ಅಂದರೆ ಪೂಜ್ಯರು ನನ್ನ ಶಕ್ತಿ ಸಾಮರ್ಥ್ಯ ವನ್ನು ಏನೆಂದು ತಿಳಿದುಕೊಂಡರೊ? ಸ್ವಲ್ಪ ಸಮಯದ ನಂತರ ಎಂಜಿನಿಯರಿಂಗ್ ವಿದ್ಯಾರ್ಥಿಗಳೆ ಇದ್ದ ಮೇನ್ ಬಿಲ್ಡಿಂಗ್‌ನ ಹಾಸ್ಟೆಲ್ ನಲ್ಲಿ ನನ್ನನ್ನು ನಿಲಯಪಾಲಕನನ್ನಾಗಿ ನೇಮಿಸಿದರು. ಅವರಿಂದಾಗಿಯೇ ಈ ಮೊಟ್ಟಮೊದಲ ಜವಾಬ್ದಾರಿಯೂ ನನ್ನ ಪಾಲಿಗೆ ಬಂದಿತು.

* ಘನ–ಮನ ಕೃತಿಯಿಂದ

ನಂತರ ಪೂಜ್ಯರು ಶ್ರೀ ಮಠದ ಕೆಲಸ ಕಾರ್ಯಗಳನ್ನು ನೋಡಿ ಕೊಳ್ಳುವ ಜವಾಬ್ದಾರಿಯನ್ನು ನನಗೆ ವಹಿಸಿದರು. ಹೀಗೆ ಸುತ್ತೂರು ಶ್ರೀ ಮಠಕ್ಕೆ ನಾನು ಹತ್ತಿರವಾದ ಪರಿಣಾಮವಾಗಿ ಅಲ್ಲಿಗೆ ಬರುವ ಗಣ್ಯಾತಿಗಣ್ಯ ವ್ಯಕ್ತಿಗಳಿಗೆ ಸ್ವಾಗತ, ಸತ್ಕಾರ ಮತ್ತು ಊಟೋಪಚಾರಗಳ ವ್ಯವಸ್ಥೆ ನೋಡಿಕೊಳ್ಳುವ ಹೆಚ್ಚಿನ ಜವಾಬ್ದಾರಿಯೂ ನನ್ನದಾಯಿತು. ಇದರ ಜೊತೆಗೆ ಶ್ರೀಮಠದಲ್ಲಿ ಜರುಗುತ್ತಿದ್ದ ಧಾರ್ಮಿಕ ಸಭೆ ಸಮಾರಂಭಗಳನ್ನು ವ್ಯವಸ್ಥೆಗೊಳಿಸುವ ಮತ್ತೊಂದು ಜವಾಬ್ದಾರಿ ಯನ್ನು ಪೂಜ್ಯರು ನನಗೆ ವಹಿಸಿದರು. ಇದೆಲ್ಲದರ ಪರಿಣಾಮವಾಗಿ ನನ್ನ ಆತ್ಮವಿಶ್ವಾಸ, ಸೇವಾ ತತ್ಪರತೆ ಮತ್ತು ಕಾಯಕದ ಮಹತ್ವ ಮುಂತಾದ ವಿಷಯಗಳ ನೇರ ಪರಿಚಯವಾಯಿತು.

ಅನಂತರ ಶ್ರೀಗಳು ನನ್ನ ಮೇಲೆ ಅದೇನು ಆಶಯ, ಅಭಿಮಾನ, ಪ್ರೀತಿ-ವಿಶ್ವಾಸ ಇಟ್ಟರೋ ಗೊತ್ತಿಲ್ಲ, ನನ್ನನ್ನೂ ಶ್ರೀ ಮಠದ ಒಬ್ಬ ಸದಸ್ಯನನ್ನಾಗಿ ಕಾಣತೊಡಗಿದರು. ಹಾಗೂ ಅನೇಕ ಜವಾಬ್ದಾರಿಯುತ ಕಾರ್ಯಗಳನ್ನು ನನಗೊಪ್ಪಿಸಿದರು. 1972-1982 ರ ಆಗಸ್ಟ್ ತನಕ ಸುತ್ತೂರು ಮಠದ ಕಾರ್ಯನಿರ್ವಹಣೆಯ ಕಾರ್ಯಕ್ರಮಗಳಲ್ಲಿ ತೊಡ ಗಿಸಿಕೊಂಡಿದ್ದೆ. ಸವಿನೆನಪುಗಳು ನನ್ನ ಜೀವನದ ಆದರ್ಶಪ್ರಾಯಗಳಾಗಿವೆ.

ಶ್ರೀ ಸುತ್ತೂರು ಜಗದ್ಗುರು ರಾಜೇಂದ್ರ ಮಹಾಸ್ವಾಮಿಗಳು ವಿಶಾಲಮನದ ಆದರ್ಶಪ್ರಾಯರಾದ ಹಾಗೂ ಅನ್ಯಮತಮಾನ್ಯಗಳ ಬಗ್ಗೆ ಗೌರವ ತೋರುವಂತಹ ಆಧ್ಯಾತ್ಮಿಕ ಗುರುಗಳಾಗಿದ್ದುದನ್ನು ನನ್ನ ಕಾಲಾವಧಿಯಲ್ಲಿ ಕಂಡೆ. ಬೇರೆ ಎಲ್ಲಾ ಮಠಾಧೀಶರುಗಳನ್ನು ಸರಿಸಮಾನವಾಗಿ ಶ್ರೀ ಗುರುಗಳು ಗೌರವಿಸುತ್ತಿದ್ದುದೂ ನನ್ನನ್ನು ಅತಿ ಪ್ರಭಾವಿತನನ್ನಾಗಿಸಿತು. ಶ್ರೀಗಳಿಗೆ ಪರಮಪೂಜ್ಯರಾದಂತಹ ಸಿದ್ಧಗಂಗಾ ಮಠಾಧೀಶರಾದ ಶ್ರೀ ಶಿವಕುಮಾರಸ್ವಾಮಿಗಳವರನ್ನು ಅನನ್ಯ ಭಕ್ತಿ ಭಾವನೆಯಿಂದ ನೋಡುತ್ತಿದ್ದುದೂ ನನ್ನನ್ನು ಮೂಕವಿಸ್ಮಿತನನ್ನಾಗಿಸಿತ್ತು. ಯಾವುದೇ ಮಠಾಧಿಪತಿಗಳು ತಮ್ಮ ಸಮಸ್ಯೆಗಳನ್ನು ಭಿನ್ನವಿಸಿಕೊಂಡರೆ ಕೂಡಲೆ ಶ್ರೀಗಳು ಸ್ಪಂದಿಸುತ್ತಿದ್ದುದು ಅವರ ಹೃದಯ ಶ್ರೀಮಂತಿಕೆ ಯನ್ನು ಎತ್ತಿ ತೋರಿಸುತ್ತಿತ್ತು. ಅನೇಕ ಬಾರಿ ಮಠಾಧೀಶರುಗಳಿಗೆ ಶ್ರೀಗಳು ನೆರವನ್ನು ನೀಡಿದ್ದನ್ನು ನಾನು ಕಣ್ಣಾರೆ ನೋಡಿದ್ದೇನೆ. ಇನ್ನು ಸಮಾಜದ ಸಾಮಾನ್ಯ ವ್ಯಕ್ತಿಗಳು ಶ್ರೀಗಳಲ್ಲಿ ತಮ್ಮ ಸಮಸ್ಯೆಗಳನ್ನು, ಕಷ್ಟ-ಕಾರ್ಪಣ್ಯಗಳನ್ನು ಹೇಳಿಕೊಂಡಾಗ ಅದನ್ನು ಸಹಾನುಭೂತಿಯಿಂದ ಕೇಳುತ್ತಿದ್ದರು ಹಾಗೂ ನಿವಾರಿಸಲು ಯತ್ನಿಸುತ್ತಿದ್ದರು.

ಶ್ರೀ ಜಗದ್ಗುರುಗಳಲ್ಲಿನ ಮತ್ತೊಂದು ವಿಶೇಷತೆ ಏನೆಂದರೆ ಯಾವುದೇ ಮಠಾಧೀಶರು ಮಠಕ್ಕೆ ಬಂದಾಗ ವಿಶೇಷ ಪ್ರಸಾದದ ವ್ಯವಸ್ಥೆಯನ್ನು ಖುದ್ದಾಗಿ ನಿಂತು ಮಾಡಿಸುತ್ತಿದ್ದುದಲ್ಲದೆ ತಾವೇ ನಿಂತು ಪ್ರಸಾದವನ್ನು ಬಡಿಸುತ್ತಿದ್ದುದನ್ನು ನೋಡಿದ್ದೇನೆ. ಇನ್ನು ವಿಶೇಷವಾಗಿ ಸುತ್ತೂರು ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದ ನೌಕರರ ತೊಂದರೆಗಳನ್ನು ಅರಿತಾಗ ಆರ್ಥಿಕವಾಗಿ ಸಹಾಯ ಮಾಡಿ ನಿವಾರಿಸಲು ಯತ್ನಿಸುತ್ತಿದ್ದರು. ಇಷ್ಟಲ್ಲದೆ ನೌಕರರ ಮನಸ್ಸಿಗೆ ನೋವಾಗದಂತೆ, ಮುಜುಗರವಾಗದಂತೆ ಸಂಸ್ಥೆಯ ಕೆಲಸಕಾರ್ಯಗಳನ್ನು ನಡೆಸಿಕೊಂಡು ಹೋಗಲು ಚೈತನ್ಯ ತುಂಬುತ್ತಿದ್ದರು. ಯಾವ ನೌಕರರೂ ಪೂಜ್ಯರ ಮುಂದೆ ನಿಂತು ಮಾತ ನಾಡಿ ನಿರಾಸೆಯಿಂದ ಹೋದದ್ದನ್ನು ನಾನು ನೋಡೇ ಇಲ್ಲ. ಎಷ್ಟೋ ಜನ ಪೂಜ್ಯರನ್ನು ಮಾತನಾಡಿಸಬೇಕೆಂದು ಬಂದವರೇ ಅವರನ್ನು ಕಂಡಾಕ್ಷಣ ಮೂಕವಿಸ್ಮಿತರಾಗಿ ಹೋಗಿದ್ದನ್ನು ನಾನು ಕಂಡಿದ್ದೇನೆ.

ಪೂಜ್ಯರ ಮತ್ತೊಂದು ವೈಶಿಷ್ಟ್ಯತೆ ಏನೆಂದರೆ ಜೆಎಸ್‌ಎಸ್ ಸಂಸ್ಥೆಯಲ್ಲಿ ಕೆಲಸ ಮಾಡುವವರನ್ನು ಗುರುತಿಸಿ ಹೆಚ್ಚಿನ ಕೆಲಸವನ್ನು ಅಂತಹವರ ಸಾಮರ್ಥ್ಯಕ್ಕೆ ಅನುಗುಣವಾಗಿ ವಹಿಸಿಕೊಟ್ಟು ತದನಂತರ ಅಂತಹವರನ್ನು ಮತ್ತೂ ಪ್ರೇರೇಪಿಸುತ್ತಿದ್ದುದು ವಿಶೇಷವಾಗಿತ್ತು. ನನಗೂ ಸಹ ಅವರು ಇಂದಿಗೂ ಪ್ರೇರಕ ಶಕ್ತಿಯೇ, ನನ್ನ ಬದುಕಿನಲ್ಲಿ ನನ್ನಿಂದ ಏನಾದರೂ ಗುರುತಿಸುವಂಥದ್ದು ನಡೆದಿದೆ ಎಂದರೆ ಅವರೂ ಕಾರಣರೆ. ಹಾಗೆ ಪೂಜ್ಯರು ನೂರಾರು ಸಾವಿರಾರು ಮಂದಿಯ ಬದುಕನ್ನು ಕಟ್ಟಿಕೊಳ್ಳಲು ಪ್ರೇರಣೆ ನೀಡಿದ್ದರು ಎಂಬುದು ಐತಿಹಾಸಿಕ ಸಂಗತಿ. ನಾನು ಮಠಾಧೀಶನಾದ ನಂತರವೂ, ಪೂಜ್ಯರು ಲಿಂಗೈಕ್ಯ ರಾಗುವ ತನಕ ಅವರ ಸಾಮೀಪ್ಯದಲ್ಲಿದ್ದು ಅವರ ಸಹಕಾರಗಳನ್ನು ಪಡೆದುಕೊಳ್ಳುತ್ತಿದ್ದೆ. ಇಂದಿಗೂ ಶ್ರೀಗಳ ನೆನಪು ನನ್ನ ಜೀವನದಲ್ಲಿ ಅಚ್ಚ ಹಸಿರಾಗಿದೆ.

□



# ಅಂತರಂಗದ ಮಾರ್ಗದರ್ಶಿಗಳು

**ಶ್ರೀ ಚನ್ನಬಸವ ಸ್ವಾಮಿಗಳು**
ಶ್ರೀ ಕಂಬಳೀಶ್ವರ ಮಠ, ಸುಕ್ಷೇತ್ರ ಮಲ್ಲನಮೂಲೆ

**ಸು**ತ್ತೂರು ಶ್ರೀಮಠ ಅನ್ನದಾಸೋಹ ಮತ್ತು ಜ್ಞಾನದಾಸೋಹಕ್ಕೆ ತನ್ನನ್ನು ತೊಡಗಿಸಿಕೊಳ್ಳುತ್ತಿದ್ದ ಆರಂಭದ ದಿನಗಳು. ಮೈಸೂರಿನ ಇಂದಿನ ಮಹಾತ್ಮ ಗಾಂಧಿ ರಸ್ತೆಯಲ್ಲಿರುವ ಕ್ಯಾತನಹಳ್ಳಿ ಸಾಹುಕಾರ್ ಸಿದ್ದಲಿಂಗಯ್ಯನವರ ಹಾಸ್ಟೆಲ್, ಶ್ರೀಮಠದ ದಾಸೋಹದ ಕೇಂದ್ರಸ್ಥಾನ. ಮತ್ತು 1951ನೇ ಇಸವಿ. ನಾನು ವಿದ್ಯಾಭ್ಯಾಸಕ್ಕಾಗಿ ಅಲ್ಲಿ ಆಶ್ರಯ ಪಡೆದಿದ್ದೆ. ಪರಮಪೂಜ್ಯ ಜಗದ್ಗುರುಗಳವರು ತಮ್ಮ ವಿದ್ಯಾಭ್ಯಾಸದ ಜೊತೆಗೆ ಹಾಸ್ಟೆಲಿನ ಉಸ್ತುವಾರಿಯನ್ನೂ ವಹಿಸಿಕೊಂಡಿದ್ದರು. ಸುತ್ತೂರು ಮಂತ್ರಮಹರ್ಷಿಗಳ ಕಾರ್ಯಕ್ಷೇತ್ರವಾಗಿದ್ದರೆ, ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳ ಕಾರ್ಯಕ್ಷೇತ್ರ ಹೆಚ್ಚಾಗಿ ಮೈಸೂರು ನಗರವಾಗಿತ್ತು. ಪೂಜ್ಯರು ಸದಾ ಹಸನ್ಮುಖಿಗಳು, ಮೃದುಭಾಷಿಗಳು. ಅವರಿಗೆ ಕೋಪ ಬರುತ್ತಿದ್ದುದು ಯಾರಾದರೂ ಧರ್ಮಕ್ಕೆ ವಿರುದ್ಧವಾಗಿ ನಡೆದುಕೊಂಡಾಗ ಮಾತ್ರ. ಆ ಕೋಪವೂ ಬಹಳ ಹೊತ್ತು ಇರುತ್ತಿರಲಿಲ್ಲ. ವಿದ್ಯಾರ್ಥಿನಿಲಯದ ನಿರ್ವಹಣೆಗೆ ಅವರು ಅಂದು ಬಹಳ ಕಷ್ಟಪಡುತ್ತಿದ್ದರು. ನಮಗೆ ಆಗ ಅಷ್ಟು ಅರ್ಥವಾಗುತ್ತಿರಲಿಲ್ಲ. ಆದರೆ ಅವರಿವರು ನಮ್ಮ ಮುಂದೆ ಮಾತನಾಡಿಕೊಳ್ಳುತ್ತಿದ್ದುದು ನಮಗೆ ಅಷ್ಟಿಷ್ಟು ತಿಳಿಯುತ್ತಿತ್ತು. ಕೆಲವರು ಆಗಾಗ ಅಂಗಡಿ ಬಾಕಿ ಕೇಳಿಕೊಂಡು ಬರುತ್ತಿದ್ದರು. ಒಮ್ಮೊಮ್ಮೆ ಅವರು ಬೇಸರ ಮಾಡಿ ಕೊಂಡು ಹಿಂತಿರುಗುತ್ತಿದ್ದುದೂ ಉಂಟು. ಆದರೆ ನಮಗೆ ಇವಾವುವೂ ಹೆಚ್ಚು ತಿಳಿಯುತ್ತಿರಲಿಲ್ಲ. ನಮ್ಮ ಶ್ರೀಮಠದ ಹಿರಿಯ ಗುರುಗಳ ಬಗ್ಗೆ ಶ್ರೀ ರಾಜೇಂದ್ರ ಸ್ವಾಮಿಗಳಿಗೆ ಅತೀವ ಪ್ರೀತಿ. ಅಷ್ಟೇ ಪ್ರೀತಿಯನ್ನು ನನ್ನ ಮೇಲೆಯೂ ತೋರಿಸುತ್ತಿದ್ದರು.

ಅವರು ಮೈಸೂರಿನಲ್ಲಿ ಇದ್ದಾಗ ಮಾತ್ರ ತಪ್ಪದೆ ವಿದ್ಯಾರ್ಥಿಗಳ ಊಟದ ಪಂಕ್ತಿಗೆ ಬರುತ್ತಿದ್ದರು. ಎಲ್ಲರೂ ಸಾಮೂಹಿಕವಾಗಿ ಪ್ರಾರ್ಥನೆ ಮಾಡುವುದನ್ನು ಗಮನಿಸುತ್ತ ಕುಳಿತಿರುತ್ತಿದ್ದರು. ಅನಂತರ ಪಂಕ್ತಿ ಪ್ರಾರಂಭವಾದಾಗ ತಮ್ಮ ಕೊಠಡಿಯಿಂದ ಮತ್ತೊಮ್ಮೆ ಬರುತ್ತಿದ್ದರು. ಜೊತೆಯಲ್ಲಿ ಕ್ಯಾತನಹಳ್ಳಿ ಶ್ರೀಗಳು ಇರುತ್ತಿದ್ದರು. ಆ ಸಂದರ್ಭದಲ್ಲಿ ಪೂಜ್ಯರು ತಮ್ಮ ಎರಡೂ ಕೈಗಳನ್ನು ಹಿಂದಕ್ಕೆ ಕಟ್ಟಿಕೊಂಡಿರುತ್ತಿದ್ದರು. ಯಾಕೆ ಹೀಗೆ ಎಂದು ನನಗೆ ತಕ್ಷಣ ತಿಳಿಯಲಿಲ್ಲ. ಅನಂತರ ನಿಧಾನವಾಗಿ ಅರ್ಥವಾಯಿತು. ಪ್ರತಿಯೊಬ್ಬರ ಬಳಿಯೂ ಬಂದು ಅವರು ಶರ್ಟಿನ ಒಳಗೆ ಕೈ ಹಾಕಿ ಪರೀಕ್ಷಿಸುತ್ತಿದ್ದರು; ಇಲ್ಲವೇ ಶರ್ಟನ್ನು ಮೇಲಕ್ಕೆ ಎತ್ತುವಂತೆ ಸೂಚಿಸುತ್ತಿದ್ದರು. ಅವರು ಇಷ್ಟಲಿಂಗವನ್ನು ಹಾಕಿ ಕೊಂಡಿದ್ದರೆ ಬದುಕಿಕೊಂಡರು. ಇಲ್ಲದಿದ್ದರೆ ಹಿಂದಕ್ಕೆ ಕಟ್ಟಿಕೊಂಡಿದ್ದ ಕೈ ಮುಂದಕ್ಕೆ ಬರುತ್ತಿತ್ತು. ಬೆತ್ತದ ಏಟು ತಪ್ಪಿದ್ದಲ್ಲ. ತ್ರಿಪುಂಡ್ರಧಾರಣೆಯ ಬಗ್ಗೆ ಇಷ್ಟಲಿಂಗದ ಬಗ್ಗೆ ಪೂಜ್ಯರು ತುಂಬಾ ಕಟ್ಟುನಿಟ್ಟು. ಹೀಗೆ ಎಲ್ಲರ ತಪಾಸಣೆಯೂ ನಡೆದ ನಂತರ ಪ್ರಸಾದ ಸ್ವೀಕರಿಸಬೇಕಾಗುತ್ತಿತ್ತು. ಅನಂತರ ಸಮಯ ಸಿಕ್ಕಿದಾಗಲೆಲ್ಲ ಅವರು ವಿದ್ಯಾರ್ಥಿಗಳನ್ನು ಉದ್ದೇಶಿಸಿ ವೀರಶೈವ ಧರ್ಮ ಸಂಸ್ಕೃತಿಯ ಬಗ್ಗೆ ಬೋಧನೆ ಮಾಡುತ್ತಿದ್ದರು. ಪೂಜ್ಯರು ಹೊಸ ಸಯ್ಯಾಜಿರಾವ್ ರಸ್ತೆಯಲ್ಲಿರುವ 'ನಿರಂಜನ ನಿಲಯ' ಎನ್ನುವಲ್ಲಿ ಹೆಚ್ಚು ವಾಸಿಸುತ್ತಿದ್ದರು. ನನ್ನನ್ನು ಆಗಾಗ ಅಲ್ಲಿಗೆ ಕರೆಸಿ ಕೊಂಡು ನಮ್ಮ ಹಿರಿಯ ಗುರುಗಳ ಬಗ್ಗೆ ಕೇಳುತ್ತಿದ್ದುದರ ಜೊತೆಗೆ ನನ್ನ ವಿದ್ಯಾಭ್ಯಾಸದ ಕುಂದುಕೊರತೆಗಳ ಬಗ್ಗೆಯೂ ವಿಚಾರಿಸಿಕೊಳ್ಳುತ್ತಿ ದ್ದರು. ನಂಜನಗೂಡಿನ ಸುತ್ತಮುತ್ತ ಧಾನ್ಯದ ಭಿಕ್ಷೆಗೆ ಹೊರಡುವಾಗಲೆಲ್ಲಾ ಪೂಜ್ಯರು ಮಲ್ಲನಮೂಲೆಯ ಕಂಬಳೀಶ್ವರ ಮಠದಲ್ಲಿ ಪೂಜಾನುಷ್ಠಾನಗಳನ್ನು

* ಘನ–ಮನ ಕೃತಿಯಿಂದ

ಮುಗಿಸಿಕೊಂಡೇ ಹೊರಡುತ್ತಿದ್ದುದು. ನಮಗೆ ಈಗಲೂ ಕಣ್ಣಿನಲ್ಲಿ ಅಚ್ಚೊತ್ತಿದಂತೆ ಇದೆ. ಆ ದಿನಗಳಲ್ಲಿ ಸುತ್ತೂರಿಗೆ ನಂಜನಗೂಡು ಮಾರ್ಗವಾಗಿಯೇ ಹೋಗಬೇಕಾಗಿತ್ತು. ಬೇರೆಯ ಮಾರ್ಗವಿರಲಿಲ್ಲ. ಹಾಗೆ ಹೋಗುವಾಗೆಲ್ಲಾ ಹೆದ್ದಾರಿಯಲ್ಲೇ ಇರುವ ಕಂಬಳೀಶ್ವರ ಮಠದ ಮುಂದೆ ನಿಂತು ಒಮ್ಮೆ ಮಠವನ್ನು ಅವಲೋಕಿಸಿಯೇ ಮುಂದಕ್ಕೆ ಹೋಗುತ್ತಿದ್ದರು. ಹಿರಿಯ ಗುರುಗಳು ಗದ್ದುಗೆಯಲ್ಲಿ ಇದ್ದರೆ ಅವರನ್ನು ಭೇಟಿ ಮಾಡಿ ಮುನ್ನಡೆಯುತ್ತಿದ್ದರು.

1986ನೇ ಇಸವಿಯಲ್ಲಿ ನಮ್ಮ ಗುರುಗಳ ಗದ್ದುಗೆಯ ಮೇಲೆ ಗೋಪುರವನ್ನು ನಿರ್ಮಿಸಿ ಕಳಸ ಪ್ರತಿಷ್ಠಾಪನೆಯನ್ನು ಮಾಡಲಾಯಿತು. ಅದೊಂದು ಅದ್ದೂರಿಯಾದ ಸಮಾರಂಭ. ಆದ್ಯಂತವಾಗಿ ಆ ಸಮಾರಂಭಕ್ಕೆ ಮಾರ್ಗದರ್ಶನ ಮಾಡಿದವರು ಶ್ರೀ ರಾಜೇಂದ್ರ ಸ್ವಾಮಿಗಳು. ಸಮಾರಂಭಕ್ಕೆ ಪೂರ್ವದ ಒಂದು ತಿಂಗಳು ನಿತ್ಯವೂ ಸಂಜೆ ಗದ್ದುಗೆಯ ಬಳಿ ಆಗಮಿಸಿ ಸಲಹೆ ಸೂಚನೆಗಳನ್ನು ಕೊಟ್ಟ ರೀತಿಯನ್ನು ನಾವು ಎಂದಿಗೂ ಮರೆಯುವಂತಿಲ್ಲ. ಅಂದಿನ ಸಮಾರಂಭಕ್ಕೆ ನಾಡಿನ ಹಿರಿಯ ಸ್ವಾಮಿಗಳು ಮತ್ತು ಉಪರಾಷ್ಟ್ರಪತಿ ಶ್ರೀ ಬಿ.ಡಿ. ಜತ್ತಿಯವರು ಆಗಮಿಸಲು ಕಾರಣರಾದವರು ಪರಮಪೂಜ್ಯ ಶ್ರೀ ಶ್ರೀಗಳವರು. ಪೂಜ್ಯರಿಂದ ಅನೇಕ ರೀತಿಯ ಮಾರ್ಗದರ್ಶನಗಳನ್ನು ಪಡೆದಿರುವುದು ನಮ್ಮ ಪುಣ್ಯವೆಂದೇ ಭಾವಿಸಿದ್ದೇವೆ. ಮೈಸೂರಿನಲ್ಲಿ ನಡೆಯುತ್ತಿದ್ದ ಜಯಂತಿ ಉತ್ಸವಗಳಲ್ಲಿ ಅನ್ನದಾಸೋಹದ ಜವಾಬ್ದಾರಿಯನ್ನು ನನಗೆ ವಹಿಸುತ್ತಿದ್ದರು. ಅವರಲ್ಲಿ ಅದಾವ ಶಕ್ತಿ ಅಡಗಿತ್ತೋ ಏನೋ, ಎಂತಹ ಒರಟು ಮನುಷ್ಯನೂ ಅವರ ಮುಂದೆ ನಿಂತ ತಕ್ಷಣ ಮೃದುವಾಗಿಬಿಡುತ್ತಿದ್ದ. ಸಮಸ್ಯೆಯ ಬೆಟ್ಟವೇ ನಮ್ಮ ಮೇಲೆ ಇದ್ದರೂ, ಅವರ ದೃಷ್ಟಿಮಾತ್ರದಿಂದ ಅದು ಹಗುರವಾಗಿ ಬಿಡುತ್ತಿತ್ತು. ಅವರ ಭೌತಿಕ ಕಾಯ ಇಂದು ನಮ್ಮ ಮುಂದೆ ಇಲ್ಲ ದಿದ್ದರೂ, ಅವರ ದಿವ್ಯ ಚೇತನ ನಮಗೆ ಇಂದೂ ಮಾರ್ಗದರ್ಶಕ ವಾಗಿದೆ ಎನ್ನುವುದು ನಮ್ಮ ಯಾವತ್ತೂ ನಂಬುಗೆಯಾಗಿದೆ.

## ನಾನೇನನೀವೆನಯ್ಯಾ?

- ಡಾ. ಸಾ.ಶಿ. ಮರುಳಯ್ಯ

"ಶ್ರದ್ಧೆಯೇ ಸಿದ್ಧಿಗೆ ಮೂಲ" ಎಂಬ ಮಹಾಮಂತ್ರವನ್ನು  
ಪಠಿಸಿದ ಮಹರ್ಷಿ ನೀನಯ್ಯಾ,  
ದುಡಿಮೆಯಲ್ಲಿಯೇ ದೇವರನ್ನು ಕಾಣಿಸಿದ  
ಕರ್ಮಯೋಗಿ ನೀನಯ್ಯಾ,  
'ನಿಜದರಿವು ಅಜನಿರವು ! ಎಂದುದ್ಘೋಷಿಸಿದ  
ಮಹಾಜ್ಞಾನಿ ನೀನಯ್ಯಾ,  
ನಿತ್ಯ ದಾಸೋಹದಲಿ ಸತ್ಯ ಶ್ರೀಗಂಧವಾಗಿ ಸವೆದುಕೊಂಡ  
ತ್ರಿವಿಧ ದಾಸೋಹಿ ನೀನಯ್ಯಾ,  
ಎನ್ನೆದೆಯ ಧರೆಯಲ್ಲಿ ಕಪ್ಪುರದ ಖಂಡವಾಗಿ ಬೆಳಗಿದ  
ಚಿಜ್ಯೋತಿ ನೀನಯ್ಯಾ,  
ಎನ್ನ ಗುರು ಶಿವರಾತ್ರಿ ರಾಜೇಂದ್ರ ಮಹಾಪ್ರಭುವೆ  
ನೀನಿತ್ತ ಬೆಳಕಿಗೆ ನಾನೇನ ನೀವೆನಯ್ಯಾ?

## ಅವತರಿಸಿ ಬಾ ಗುರುವೆ

- ಎಚ್. ಗಂಗಾಧರನ್

ನೀನೊಮ್ಮೆ ಬರಬಾರದೆ ಪರಮ ಗುರುವೆ  
ಬಂದೊಮ್ಮೆ ನಮ್ಮೆಲ್ಲರನು ಸಲಹಬಾರದೆ

ಮತ್ತೊಮ್ಮೆ ಮಗದೊಮ್ಮೆ ಬರಬಾರದೆ!  
ಹತ್ತು ಶತಮಾನದ ಹಿಂದೆ ನೀ ಬಂದಂತೆ  
ಸುತ್ತೂರು ಪುರದೆ ಕಪಿಲ ಜಲದಿ ನಿಂದಂತೆ  
ಸುತ್ತುತ್ತ ಬಂದ ರಾಜೇಂದ್ರಚೋಳಗೊಲಿದಂತೆ

ಹಿರಿದೊಮ್ಮೆ ನೀನವತರಿಸಿ ಧರೆಗೆ ಬಂದಂತೆ  
ಎಂದೆಂದು ಇಂದುಧರನ ನೀ ಸ್ಮರಿಸಿದಂತೆ  
ಅಂದೊಮ್ಮೆ ಕೋಟಿ ಶಿವಮಂತ್ರ ಬರೆದಂತೆ  
ಮುಂದೊಮ್ಮೆ ಬಂದ ಶಿವಯೋಗಿ ನೀನಂತೆ

ದೀನ ಜನರುದ್ಧಾರವಂ ಬಯಸಿ ಬಂದಂತೆ  
ಜ್ಞಾನಾನ್ನ ದಾಸೋಹದೈಸಿರಿ ಧರೆಗೆ ಬಂದಂ  
ಇನ್ನೊಮ್ಮೆ ರಾಜೇಂದ್ರರಾಗಿ ಬಂದಂತೆ  
ಮುನ್ನೊಮ್ಮೆ ಶ್ರೀ ಶಿವರಾತ್ರೀಶ ಬಂದಂತೆ

## ವಿದ್ಯಾರ್ಥಿ ಸಂಘದ ಉದ್ಘಾಟನೆ



ಮೈಸೂರಿನ ಶ್ರೀ ಶಿವರಾತ್ರೀಶ್ವರ ನಗರದಲ್ಲಿರುವ ಜೆಎಸ್‌ಎಸ್ ಪ್ರೌಢಶಾಲೆ ಮತ್ತು ಪದವಿಪೂರ್ವ ಕಾಲೇಜಿನಲ್ಲಿ ವಿದ್ಯಾರ್ಥಿ ಸಂಘವನ್ನು ಸರ್ಕಾರಿ ಶಿಕ್ಷಣ ಮಹಾವಿದ್ಯಾಲಯದ ಪ್ರವಾಚಕರಾದ ಶ್ರೀ ಡಿ.ಆರ್. ಅಮಿತ್‌ರವರು ಉದ್ಘಾಟಿಸಿದರು. (8 ಜುಲೈ 2026)

**ಮೈಸೂರಿನ ಶ್ರೀ ಶಿವರಾತ್ರೀಶ್ವರನಗರದಲ್ಲಿರುವ ಜೆಎಸ್‌ಎಸ್ ಪ್ರೌಢಶಾಲೆ ಮತ್ತು ಪದವಿಪೂರ್ವ ಕಾಲೇಜಿನಲ್ಲಿ** ದಿನಾಂಕ 8.7.2026ರಂದು ವಿದ್ಯಾರ್ಥಿ ಸಂಘವನ್ನು ಸರ್ಕಾರಿ ಶಿಕ್ಷಕ ಶಿಕ್ಷಣ ಮಹಾವಿದ್ಯಾಲಯದ ಪ್ರವಾಚಕರಾದ ಶ್ರೀ ಡಿ.ಆರ್. ಅಮಿತ್‌ರವರು ಉದ್ಘಾಟಿಸಿ ಮಾತನಾಡುತ್ತಾ, ಜ್ಞಾನದ ಜೊತೆಗೆ ಆರೋಗ್ಯದ ಬಗ್ಗೆಯೂ ಹೆಚ್ಚಿನ ಗಮನ ನೀಡಬೇಕು. ಎಲ್ಲಾ ಮಕ್ಕಳು ತಮ್ಮ ಗುರಿ ತಲುಪುವಂತೆ ಶ್ರಮವಹಿಸಬೇಕು, ವಿದ್ಯಾರ್ಥಿಗಳೆಲ್ಲರೂ ತಮ್ಮ ಕನಸುಗಳನ್ನು ನನಸಾಗಿಸಿಕೊಳ್ಳುವತ್ತ ಕೌಶಲ್ಯವನ್ನು ಅಭಿವೃದ್ಧಿ ಪಡಿಸಿಕೊಳ್ಳಬೇಕು ಎಂದರು.

ಶಾಲಾ ಶಿಕ್ಷಣ ವಿಭಾಗದ ಸಹ ನಿರ್ದೇಶಕರಾದ ಶ್ರೀ ಎಂ. ಶಿವಮಾದಪ್ಪರವರು, ವಿದ್ಯಾರ್ಥಿಗಳ ಪ್ರಗತಿಗಾಗಿಯೆ ಸಂಘವನ್ನು ಸ್ಥಾಪಿಸಲಾಗಿದೆ. ಶಾಲಾ ಕಾಲೇಜಿನಲ್ಲಿ ಕಲ್ಪಿಸಲಾಗಿರುವ ಸವಲತ್ತುಗಳನ್ನು ಸದುಪಯೋಗ ಪಡಿಸಿಕೊಂಡು ಕಠಿಣ ಪರಿಶ್ರಮದಿಂದ ಉನ್ನತ ಸಾಧನೆ ಮಾಡಬೇಕೆಂದು ತಿಳಿಸಿದರು.

ಮೈಸೂರಿನ ಲಯನ್ಸ್ ಶಾಲೆಯ ಕಾರ್ಯದರ್ಶಿಗಳಾದ ಶ್ರೀ ಸಿ. ಮೋಹನ್ ಕುಮಾರ್‌ರವರು ವಿದ್ಯಾರ್ಥಿಗಳು ಸಂಸ್ಥೆಯು ನೀಡುತ್ತಿರುವ ಸೌಲಭ್ಯಗಳನ್ನು ಉತ್ತಮವಾಗಿ ಬಳಸಿಕೊಂಡು ಬೆಳೆಯಬೇಕು. ಜೀವನದಲ್ಲಿ ಶಿಸ್ತು, ಸರಳತೆಯನ್ನು ಮೈಗೂಡಿಸಿಕೊಳ್ಳಬೇಕು. ಉತ್ತಮ ಗುರಿಗಳನ್ನು ಇಟ್ಟುಕೊಂಡು ಸಾಧಕರಾಗಬೇಕು. ಮಹಾಪುರುಷರುಗಳ ಆದರ್ಶಗಳನ್ನು ಮೈಗೂಡಿಸಿಕೊಂಡು ಸಮಾಜದಲ್ಲಿ ಕೀರ್ತಿ ಗಳಿಸಬೇಕೆಂದು ಹೇಳಿದರು.

ಜೆಎಸ್‌ಎಸ್ ವೈದ್ಯಕೀಯ ಮಹಾವಿದ್ಯಾಲಯದ ಆಡಳಿತಾಧಿಕಾರಿಗಳಾದ ಶ್ರೀ ಎಸ್.ಆರ್. ಸತೀಶ್‌ಚಂದ್ರರವರು ವಿದ್ಯೆ, ಬುದ್ಧಿ ಹಾಗೂ ಜ್ಞಾನ ಸಂಪಾದನೆ ಮುಖ್ಯವಾದುದು. ಇರುವ ಸೌಲಭ್ಯಗಳನ್ನು ಬಳಸಿಕೊಂಡು ಚೆನ್ನಾಗಿ ಓದಬೇಕು ಎಂದರು.

ಇದೇ ಸಂದರ್ಭದಲ್ಲಿ 2025–26ನೇ ಸಾಲಿನ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಪರೀಕ್ಷೆಯಲ್ಲಿ ಅತೀ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.

ಪ್ರೌಢಶಾಲೆ ವಿದ್ಯಾರ್ಥಿಗಳು ಪ್ರಾರ್ಥಿಸಿದರು. ಶ್ರೀಮತಿ ಕೆ.ವಿ. ದಾಕ್ಷಾಯಿಣಿ ಸ್ವಾಗತಿಸಿದರು. ಕು. ತರುಣ್‌ದತ್ತ ಮತ್ತು ಕು. ತನುಶ್ರೀ ಕಾಲೇಜಿನ ವಿದ್ಯಾರ್ಥಿ ಸಂಘದ ಮುನ್ನೋಟ ಪರಿಚಯಿಸಿದರು ಉಪನ್ಯಾಸಕರಾದ ಶ್ರೀಮತಿ ಶೈಲಜ ವಂದಿಸಿದರು. ಕು. ಎಂ.ಎನ್. ಗಾನವಿ ಮತ್ತು ಕು. ಆರ್. ಮಹಾಲಕ್ಷ್ಮಿ ಕಾರ್ಯಕ್ರಮ ನಿರೂಪಿಸಿದರು.

## ಹೂಟಗಳ್ಳಿಯಲ್ಲಿ ಜೆಎಸ್‌ಎಸ್ ಪದವಿಪೂರ್ವ ಕಾಲೇಜು ಆರಂಭ




ಮೈಸೂರಿನ ಹೂಟಗಳ್ಳಿಯಲ್ಲಿ ಜೆಎಸ್‌ಎಸ್ ಪದವಿಪೂರ್ವ ಕಾಲೇಜಿನ ನೂತನ ಕಟ್ಟಡದ ಆರಂಭವು ದಿನಾಂಕ 6.7.2026ರಂದು ವಿಶೇಷಪೂಜೆಗಳೊಂದಿಗೆ ನೆರವೇರಿತು. ಕಾರ್ಯನಿರ್ವಾಹಕ ಕಾರ್ಯದರ್ಶಿಗಳಾದ ಡಾ. ಸಿ.ಜಿ. ಬೆಟಸೂರಮಠ, ಕಾರ್ಯದರ್ಶಿಗಳಾದ ಪ್ರೊ. ಎಸ್.ಪಿ. ಮಂಜುನಾಥ್, ಪ್ರೊ. ಎಸ್. ಶಿವಕುಮಾರಸ್ವಾಮಿ, ಇಂಜಿನಿಯರಿಂಗ್ ವಿಭಾಗದ ನಿರ್ದೇಶಕರು, ಶಾಲಾಶಿಕ್ಷಣ ವಿಭಾಗದವರು, ಮಹಾವಿದ್ಯಾಪೀಠದ ಅಧಿಕಾರಿಗಳು, ಪದವಿಪೂರ್ವ ಕಾಲೇಜು ಮತ್ತು ಪ್ರೌಢಶಾಲೆಯ ಸಿಬ್ಬಂದಿ ವರ್ಗದವರು, ಪೋಷಕರು ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದ್ದರು.

# ಕೌಶಲ್ಯಯುತ ಜ್ಞಾನಾರ್ಜನೆ ಅತ್ಯಗತ್ಯ




ಮೈಸೂರಿನ ಊಟಿ ರಸ್ತೆಯಲ್ಲಿರುವ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನಲ್ಲಿ ನಡೆದ ದೀಕ್ಷಾರಂಭ ಕಾರ್ಯಕ್ರಮವನ್ನು ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿಗಳಾದ ಪ್ರೊ. ಎನ್.ಕೆ. ಲೋಕನಾಥ್‌ರವರು ಉದ್ಘಾಟಿಸಿದರು. (6 ಜುಲೈ 2026)

ಉನ್ನತ ಶಿಕ್ಷಣದಲ್ಲಿ ಪಠ್ಯದ ಕಲಿಕೆಯ ಜೊತೆಗೆ ಆಧುನಿಕತೆಯ ಬದಲಾವಣೆಗಳೊಂದಿಗೆ ಹೊಂದಿಕೊಳ್ಳುವ ಮನೋಭಾವವನ್ನು ವಿದ್ಯಾರ್ಥಿಗಳು ಬೆಳೆಸಿಕೊಳ್ಳಬೇಕು. ಉದ್ಯೋಗಕ್ಕೆ ಅಂಕಪಟ್ಟಿ ಅಷ್ಟೇ ಮುಖ್ಯವಲ್ಲ, ವಿದ್ಯಾರ್ಥಿಗಳಲ್ಲಿ ಇಂದು ಕೌಶಲ್ಯಯುತ ಜ್ಞಾನಾರ್ಜನೆ ಅತ್ಯಗತ್ಯ. ಕಲಿಕೆಯ ಪರಿಸರ, ಸ್ನೇಹ ವಲಯ, ಸ್ವ ಅಧ್ಯಯನ, ಅಧ್ಯಾಪಕರು ಮತ್ತು ವಿದ್ಯಾರ್ಥಿಗಳ ನಡುವಿನ ಬಾಂಧವ್ಯ ಎಲ್ಲವೂ ಶಿಕ್ಷಣದ ಗುರಿ ಸಾಕಾರಕ್ಕೆ ಪೂರಕವಾದವು ಎಂದು ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿಗಳಾದ ಪ್ರೊ. ಎನ್.ಕೆ. ಲೋಕನಾಥ್‌ರವರು ಹೇಳಿದರು.

**ಮೈಸೂರಿನ ಊಟಿ ರಸ್ತೆಯಲ್ಲಿರುವ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನಲ್ಲಿ** ಸ್ನಾತಕ ಪದವಿ ವಿದ್ಯಾರ್ಥಿಗಳಿಗೆ ಐಕ್ಯುಎಸಿ ಸಹಯೋಗದಲ್ಲಿ ದಿನಾಂಕ 6.7.2026ರಂದು ಹಮ್ಮಿಕೊಂಡಿದ್ದ ದೀಕ್ಷಾರಂಭ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಶ್ರೀಗಳವರ ದೂರದೃಷ್ಟಿತ್ವದಲ್ಲಿ ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳು ವಿದ್ಯಾರ್ಥಿಗಳಿಗೆ ಅತ್ಯುತ್ತಮ ಶಿಕ್ಷಣವನ್ನು ನೀಡುತ್ತಿವೆ. ಆಧುನಿಕ ಸಂದರ್ಭದ ಹೊಸ ಸವಾಲುಗಳನ್ನು ವಿದ್ಯಾರ್ಥಿಗಳು ಎದುರಿಸಲು ಪೂರಕವಾಗುವಂತೆ ಶಿಕ್ಷಣದ ಮಾನದಂಡಗಳನ್ನು ಪರಿಣಾಮಕಾರಿಯಾಗಿ ಅನುಸರಿಸುತ್ತಿವೆ. ವಿದ್ಯಾರ್ಥಿಗಳು ಇಂದಿನ ಸ್ಪರ್ಧಾತ್ಮಕ ಜಗತ್ತಿನಲ್ಲಿ ಜ್ಞಾನದ ಜೊತೆಗೆ ಮೌಲ್ಯಗಳನ್ನು ರೂಪಿಸಿಕೊಳ್ಳಬೇಕು. ಕಲಿಯುವ ಸಾಮರ್ಥ್ಯ, ತಾಂತ್ರಿಕ ಕೌಶಲ್ಯತೆ, ಪ್ರಾಮಾಣಿಕ ಓದು, ಆತ್ಮವಿಶ್ವಾಸ, ಶಿಸ್ತುಬದ್ಧವಾದ ದಿನಚರಿ, ಸಾಮಾಜಿಕ ಕಾಳಜಿ ಬೆಳೆಸಿಕೊಳ್ಳಬೇಕು. ತಂದೆ ತಾಯಿಗಳ ಕನಸುಗಳು ಮತ್ತು ಅವರ ಶ್ರಮದ ಅರಿವಿರಬೇಕು. ನಿರಂತರವಾದ ಅಧ್ಯಯನ

ಹೊಸ ಹೊಸ ಪುಸ್ತಕಗಳ ಓದು, ಉತ್ತಮ ಸ್ನೇಹ ವಲಯ ಸಮಯದ ಸರಿಯಾದ ಸದುಪಯೋಗ ವಿದ್ಯಾರ್ಥಿಗಳಿಗೆ ಅಗತ್ಯ. ಮೈಸೂರು ವಿಶ್ವವಿದ್ಯಾನಿಲಯ ದೇಶದಲ್ಲಿಯೇ ತನ್ನದೇ ಆದ ಸ್ಥಾನವನ್ನು ಪಡೆದುಕೊಂಡಿದೆ. ಈ ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಬರುವ ಈ ಕಾಲೇಜು ಕೂಡ ನಾಡಿಗೆ ಅನೇಕ ಸಾಧಕರನ್ನು ನೀಡಿದೆ ಎಂದರು.

ಕಾಲೇಜಿನ ಮುಖ್ಯ ಕಾರ್ಯನಿರ್ವಾಹಕರಾದ ಪ್ರೊ. ಬಿ.ವಿ. ಸಾಂಬಶಿವಯ್ಯರವರು ಮಾತನಾಡಿ, ಶಿಕ್ಷಣದ ಮೂಲಕ ಮಾನವನ ಅಭಿವೃದ್ಧಿಗಾಗಿ ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳು ಅವಿರತವಾಗಿ ಶ್ರಮಿಸುತ್ತಿವೆ. ಉನ್ನತ ಶಿಕ್ಷಣದಿಂದ ವ್ಯಕ್ತಿಯ ಸರ್ವತೋಮುಖ ಅಭಿವೃದ್ಧಿ ಸಾಧ್ಯ. ವಿಶ್ವವಿದ್ಯಾಲಯ ಧನಸಹಾಯ ಆಯೋಗವು ಹೊರಡಿಸಿರುವ ಮಾರ್ಗಸೂಚಿಯ ಪ್ರಕಾರ ಉನ್ನತ ಶಿಕ್ಷಣಕ್ಕೆ ದಾಖಲಾಗುವ ಹೊಸ ವಿದ್ಯಾರ್ಥಿಗಳಿಗೆ ವಿಶ್ವವಿದ್ಯಾಲಯಗಳು ಹಾಗೂ ಶಿಕ್ಷಣ ಸಂಸ್ಥೆಗಳು ಈ ದೀಕ್ಷಾರಂಭ ಕಾರ್ಯಕ್ರಮದ ಮೂಲಕ ಶಿಕ್ಷಣದ ಗುರಿ ಉದ್ದೇಶಗಳನ್ನು ಹಾಗೂ ವಿದ್ಯಾರ್ಥಿಗಳ ಜವಾಬ್ದಾರಿಗಳನ್ನು ತಿಳಿಸಬೇಕು. ವಿದ್ಯಾರ್ಥಿಗಳು ಹೊಸ ಪರಿಸರಕ್ಕೆ ಹೊಂದಿಕೊಳ್ಳಲು, ಅವರ ಮತ್ತು ಶಿಕ್ಷಕರ ನಡುವಿನ ಬಾಂಧವ್ಯವನ್ನು ಬೆಳೆಸಲು, ಸಾಮಾಜಿಕ ಪ್ರಸ್ತುತೆಯ ವಿವಿಧ ಸಮಸ್ಯೆಗಳ ಬಗ್ಗೆ ಸೂಕ್ಷ್ಮತೆಯನ್ನು ಅಭಿವೃದ್ಧಿಪಡಿಸಲು, ಮಾನವೀಯ ಮೌಲ್ಯಗಳನ್ನು ಅಳವಡಿಸಿಕೊಳ್ಳಲು ಮಾರ್ಗದರ್ಶನ ನೀಡುವುದು ಈ ಕಾರ್ಯಕ್ರಮದ ಉದ್ದೇಶವಾಗಿದೆ. ಅಲ್ಲದೇ ರಾಷ್ಟ್ರದ ಹೊಸ ಸವಾಲುಗಳಿಗೆ ವಿದ್ಯಾರ್ಥಿಗಳನ್ನು ತಯಾರು ಮಾಡಲು ಈ ಕಾರ್ಯಕ್ರಮ ಹೊಸ ಹೆಜ್ಜೆಯ ಒಂದು ಸೇತುವೆಯಾಗಿದೆ. ಫಲಪ್ರದ ಬೋಧನೆ-ಕಲಿಕೆಯ ಅನುಭವಗಳ ವೇಗವನ್ನು ಹೊಂದಿಸಲು ಶಿಕ್ಷಕರು ಮತ್ತು ವಿದ್ಯಾರ್ಥಿಗಳಿಗೆ ಈ ಕಾರ್ಯಕ್ರಮ ನೆರವಾಗುತ್ತದೆ. ಶಿಕ್ಷಣವು ಎಲ್ಲಾ ಕ್ಷೇತ್ರಗಳ ಜ್ಞಾನವನ್ನು ಪಡೆಯಲು, ಜವಾಬ್ದಾರಿಯುತ ಪ್ರಜ್ಞೆಯನ್ನು ಬೆಳೆಸಿಕೊಳ್ಳಲು ಮತ್ತು ಆಂತರಿಕ ಸಾಮರ್ಥ್ಯವನ್ನು ವೃದ್ಧಿ ಮಾಡಿಕೊಳ್ಳಲು ಸಹಾಯ ಮಾಡುತ್ತದೆ. ಸಾಮಾಜೀಕರಣ, ಸಹವರ್ತನೆ, ಆಡಳಿತಾತ್ಮಕ ಮನೋಭಾವ ಬೆಳವಣಿಗೆ ಇವುಗಳ ಜೊತೆಗೆ ದೈಹಿಕ ಚಟುವಟಿಕೆ, ಕ್ರೀಡೆ, ಅಧ್ಯಾಪಕರೊಂದಿಗೆ ಆಶಾದಾಯಕವಾಗಿ ಸಂಪರ್ಕ ಸಾಧಿಸಲು ಮಾರ್ಗದರ್ಶನ ಮಾಡುವುದು ವಿದ್ಯಾರ್ಥಿಗಳ ಸಂವಹನ ಕೌಶಲ್ಯಗಳನ್ನು ಉನ್ನತೀಕರಿಸಲು ಅಲ್ಪಾವಧಿಯ ಕೋರ್ಸ್‌ಗಳ ಬಗ್ಗೆ ಮಾಹಿತಿ ನೀಡುವುದು ಇಂದಿನ ಕಾರ್ಯಕ್ರಮದ ಆಶಯವಾಗಿದೆ. ಇದರ ಸದುಪಯೋಗವನ್ನು ವಿದ್ಯಾರ್ಥಿಗಳು ಪಡೆದುಕೊಳ್ಳಬೇಕು ಎಂದರು.

ಪ್ರಾಂಶುಪಾಲರಾದ ಡಾ. ಎಂ. ಪ್ರಭುರವರು ಸ್ವಾಗತಿಸಿದರು. ಕು. ಸಾನ್ನಿಧ್ಯ ಬೀರೂರ್ ಪ್ರಾರ್ಥಿಸಿದರು. ಅಧ್ಯಾಪಕರಾದ ಡಾ. ಎಲ್.ವಿ. ವಿನಯ್‌ಕುಮಾರ್‌ರವರು ವಂದಿಸಿದರು. ಡಾ. ಪೂಜಾ ಕಾರ್ಯಕ್ರಮ ನಿರೂಪಿಸಿದರು. ಕಾಲೇಜಿನ ಐಕ್ಯುಎಸಿ ಸಂಚಾಲಕರಾದ ಡಾ. ಎನ್. ರಾಜೇಂದ್ರಪ್ರಸಾದ್ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಸ್ನಾತಕ ಪದವಿ ಕಾಲೇಜಿನ ಅಧ್ಯಾಪಕ ಹಾಗೂ ಅಧ್ಯಾಪಕೇತರರು, ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಧರ್ಮ ಘೋಷಣೆ ಇಲ್ಲ, ಪ್ರವಚನದ ಪಟುವಲ್ಲ;
ನಾನೆಂಬ ಮಮಕಾರ ಬಳಿ ಸುಳಿಯಲಿಲ್ಲ;
ಮಾಡುವುದು ನೀಡುವುದು, ಮಾಡಿ ನೀಡಿದೆನೆಂಬ
ಮಾಟದೊಳು ತಾನೆಂಬುದೇನುಳಿಯಲಿಲ್ಲ
ಕಲ್ಪನೆಯು ತತ್ತರಿಸುವೆತ್ತರಕೆ ಏರಿದಿರಿ
ನೂರಾರು ಸಂಸ್ಥೆಗಳ ರೂವಾರಿಯಾಗಿ;
ಆ ದಿಗಂತದಂಚನು ದಾಟಿ, ವ್ಯಕ್ತಿತ್ವವನು ಮೀರಿ
ಬೆಳೆದು ನಿಂತಿರಿ ಮಹಾಮಹಿಮ ಬೆಳಕಾಗಿ
ಶಿವರಾತ್ರಿ ಜಾಗರದ ಶಿವಶಕ್ತಿಯಾಗಿ

– ಎಚ್. ತಿಪ್ಪೇರುದ್ರಸ್ವಾಮಿ

## ಸರ್ವತೋಮುಖ ಬೆಳವಣಿಗೆಗೆ ಶಿಕ್ಷಣ ಅವಶ್ಯಕ




ಮೈಸೂರಿನ ಸರಸ್ವತಿಪುರಂನಲ್ಲಿರುವ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ದೀಕ್ಷಾರಂಭ ಕಾರ್ಯಕ್ರಮವನ್ನು ಚಾಮರಾಜನಗರ ವಿಶ್ವವಿದ್ಯಾನಿಲಯದ ಕುಲಪತಿಗಳಾದ ಪ್ರೊ. ಎಂ.ಆರ್. ಗಂಗಾಧರ್‌ರವರು ಉದ್ಘಾಟಿಸಿ ಮಾತನಾಡುತ್ತಿರುವುದು. (6 ಜುಲೈ 2026)

ಸಾಮಾಜಿಕ, ಆರ್ಥಿಕ ಹಾಗೂ ಸರ್ವತೋಮುಖ ಬೆಳವಣಿಗೆಗೆ ಶಿಕ್ಷಣ ಅವಶ್ಯಕ ಎಂದು ಚಾಮರಾಜನಗರ ವಿಶ್ವವಿದ್ಯಾನಿಲಯದ ಕುಲಪತಿಗಳಾದ ಪ್ರೊ ಎಂ. ಆರ್. ಗಂಗಾಧರ್‌ರವರು ಹೇಳಿದರು.

**ಮೈಸೂರಿನ ಸರಸ್ವತಿಪುರಂನಲ್ಲಿರುವ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ** ದಿನಾಂಕ 6.7.2026ರಂದು 2026–27ರ ದೀಕ್ಷಾರಂಭ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು. ದೀಕ್ಷಾರಂಭವು ಕಾಲೇಜನ್ನು ಪರಿಚಯಿಸುವುದು, ವಿದ್ಯಾರ್ಥಿಗಳನ್ನು ಒಟ್ಟುಗೂಡಿಸುವುದು, ಜ್ಞಾನದ ಜೊತೆಗೆ ಕೌಶಲ್ಯ ಅಭಿವೃದ್ಧಿ ಮತ್ತು ಶಿಸ್ತನ್ನು ತಿಳಿಸಿಕೊಡುವ ಕಾರ್ಯಕ್ರಮವಾಗಿದೆ. ವಿದ್ಯಾರ್ಥಿಗಳು ಸತತ ಪರಿಶ್ರಮದಿಂದ ಗುರಿ ಹೊಂದಲು ಸಾಧ್ಯವಿದೆ. ಪೋಷಕರ ಪರಿಶ್ರಮವನ್ನು ಗೌರವಿಸಿ ಸಮಯಪಾಲನೆ ಮತ್ತು ಜವಾಬ್ದಾರಿಯುತವಾಗಿ ವರ್ತಿಸಿದರೆ ಗುರಿ ತಲುಪಬಹುದು ಎಂದು ಹೇಳಿದರು.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕನ್ನಡ ವಿಭಾಗದ ಸಹ ಪ್ರಾಧ್ಯಾಪಕರಾದ ಡಾ. ಜ್ಯೋತಿಶಂಕರ್‌ರವರು ಮಾತನಾಡಿ, ಗುರಿಯನ್ನು ಸಾಧಿಸುವವರೆಗೂ ವಿದ್ಯಾರ್ಥಿಗಳು ಜಾಗೃತರಾಗಿರಬೇಕು. ಜ್ಞಾನಕಿಂತ ದೊಡ್ಡದು ಯಾವುದೂ ಇಲ್ಲ. ಗುರುವನ್ನು ಗೌರವಿಸಬೇಕು, ಗುರುವನ್ನು ಗೌರವಿಸದ

ವ್ಯಕ್ತಿ ಗೌರವಕ್ಕೆ ಅರ್ಹನಲ್ಲ. ಸ್ತ್ರೀ ಎಂಬ ಗುರುತಿಗಿಂತ ತನ್ನ ಅರ್ಹತೆಯ ಮೂಲಕ ಸಮಾಜದಲ್ಲಿ ಸ್ಥಾನವನ್ನು ಪಡೆಯಬೇಕು ಎಂದು ತಿಳಿಸಿದರು.

ಕಾಲೇಜು ಶಿಕ್ಷಣ ವಿಭಾಗದ ನಿರ್ದೇಶಕರಾದ ಪ್ರೊ. ಮೊರಬದ ಮಲ್ಲಿಕಾರ್ಜುನರವರು, ವಿದ್ಯಾರ್ಥಿಗಳು ಬದುಕಿನ ಸತ್ಯದ ಸೂಕ್ಷ್ಮವನ್ನು ಅರಿತುಕೊಳ್ಳಬೇಕು. ಭಾರತೀಯ ಸಂಸ್ಕೃತಿಯ ಸಾಧಕರನ್ನು ತಿಳಿದುಕೊಂಡು ಅವರ ಹಾದಿಯಲ್ಲಿ ಜೀವನವನ್ನು ರೂಪಿಸಿಕೊಳ್ಳಬೇಕು. ಮಹಿಳೆಯರಿಂದ ಉತ್ತಮ ಸಾಧನೆ ಮಾಡಲು ಸಾಧ್ಯವಿದೆ. ಜೆಎಸ್ಎಸ್ ಸಂಸ್ಥೆಯು ಮಹಿಳಾ ಶಿಕ್ಷಣ ಮತ್ತು ಸಬಲೀಕರಣಕ್ಕೆ ಶ್ರಮಿಸುತ್ತಿದೆ ಎಂದರು.

ಪ್ರಾಚಾರ್ಯರಾದ ಡಾ. ರೇಚಣ್ಣ, ದೀಕ್ಷಾರಂಭದ ಸಂಚಾಲಕರಾದ ಡಾ. ಡಿ.ಎಂ. ಲೋಕೇಶ್ವರಿ ಉಪಸ್ಥಿತರಿದ್ದರು. ಕು. ಧಾತ್ರಿ ಮತ್ತು ವೃಂದದವರು ಪ್ರಾರ್ಥಿಸಿದರು. ಕನ್ನಡ ವಿಭಾಗದ ಮುಖ್ಯಸ್ಥರಾದ ಶ್ರೀ ಆರ್.ಎಸ್. ಕುಮಾರ್ ಸ್ವಾಗತಿಸಿದರು. ಸಹಾಯಕ ಪ್ರಾಧ್ಯಾಪಕರಾದ ಶ್ರೀ ಎಚ್.ಎಸ್. ಸಿದ್ದಮಲ್ಲಿಕಾರ್ಜುನಸ್ವಾಮಿ ವಂದಿಸಿದರು. ಸಹಾಯಕ ಪ್ರಾಧ್ಯಾಪಕರಾದ ಶ್ರೀಮತಿ ಜೆ. ಪುಷ್ಪಲತಾ ಕಾರ್ಯಕ್ರಮ ನಿರೂಪಿಸಿದರು.



ಸುತ್ತೂರಿನ ಜೆಎಸ್ಎಸ್ ಶಾಲೆಯ ವಿದ್ಯಾರ್ಥಿಗಳು ಮೈಸೂರಿನ ಜಿ.ಕೆ. ವಿನ್ಯಾಸ ಯೋಗಕೇಂದ್ರ ಮತ್ತು ಶ್ರೀಕೃಷ್ಣ ಯೋಗಾಸ್‌ರವರು ಹಮ್ಮಿಕೊಂಡಿದ್ದ ರಾಜ್ಯಮಟ್ಟದ ಮುಕ್ತ ಯೋಗ ಸ್ಪರ್ಧೆಯಲ್ಲಿ ಭಾಗವಹಿಸಿ, ವೈಯಕ್ತಿಕ ಹಾಗೂ ತಂಡ ಪ್ರಶಸ್ತಿಯನ್ನು ಪಡೆದುಕೊಂಡಿರುತ್ತಾರೆ. ಚಿತ್ರದಲ್ಲಿ ಯೋಗ ಪಟುಗಳೊಂದಿಗೆ, ಶಾಲಾ ಮುಖ್ಯೋಪಾಧ್ಯಾಯರುಗಳು ಹಾಗೂ ಯೋಗಾಸನ ತರಬೇತಿ ಶಿಕ್ಷಕರುಗಳಿದ್ದಾರೆ.

## ಜೆಎಸ್‌ಎಸ್ ಅರ್ಬನ್ ಹಾತ್‌ನಲ್ಲಿ ಗುಜರಾತ್ ಕರಕುಶಲ ಉತ್ಸವ




ಮೈಸೂರಿನ **ಜೆಎಸ್‌ಎಸ್ ಅರ್ಬನ್ ಹಾತ್‌ನಲ್ಲಿ** ದಿನಾಂಕ 3.7.2026ರಂದು ಗುಜರಾತ್ ಕರಕುಶಲ ಉತ್ಸವ–2026ಕ್ಕೆ ಚಾಲನೆ ನೀಡಲಾಯಿತು. ಕೈಮಗ್ಗ ಮತ್ತು ಜವಳಿ ಇಲಾಖೆಯ ಆಯುಕ್ತರು ಹಾಗೂ ನಿರ್ದೇಶಕರಾದ ಶ್ರೀ ಎ.ಬಿ. ಬಸವರಾಜುರವರು ಉತ್ಸವವನ್ನು ಉದ್ಘಾಟಿಸಿದರು. ಉತ್ಸವವು ಜುಲೈ 3ರಿಂದ ಜುಲೈ 12ರವರೆಗೆ ಒಟ್ಟು 10 ದಿನಗಳ ಕಾಲ ನಡೆಯಿತು. ಸಾರ್ವಜನಿಕರಿಗೆ ಉಚಿತ ಪ್ರವೇಶ ಕಲ್ಪಿಸಲಾಗಿತ್ತು.

ಈ ಉತ್ಸವದಲ್ಲಿ ಗುಜರಾತ್ ರಾಜ್ಯದ 100 ಮಳಿಗೆಗಳಲ್ಲಿ ಕರಕುಶಲ ಹಾಗೂ ಕೈಮಗ್ಗ ಉತ್ಪನ್ನಗಳ ಪ್ರದರ್ಶನ ಮತ್ತು ಮಾರಾಟ ನಡೆಯಿತು. ಗುಜರಾತಿನ ಸಾಂಪ್ರದಾಯಿಕ ಕಲೆ, ಕೈಮಗ್ಗ ಹಾಗೂ ಕರಕುಶಲ ವೈಭವವನ್ನು ಒಂದೇ ವೇದಿಕೆಯಲ್ಲಿ ಪರಿಚಯಿಸುವ ಅಪರೂಪದ ಅವಕಾಶ ಇದಾಗಿತ್ತು. ಉತ್ಸವದ ವಿಶೇಷ ಆಕರ್ಷಣೆಯಾಗಿ ಜುಲೈ 3, 4 ಹಾಗೂ 5ರಂದು ಸಂಜೆ ಗುಜರಾತಿನ ಪ್ರಸಿದ್ಧ ರಾಸ್–ಗರ್ಬಾ ಹಾಗೂ ಸಾಂಸ್ಕೃತಿಕ ನೃತ್ಯ ಪ್ರದರ್ಶನಗಳು ನಡೆದವು. ಉತ್ಸವಕ್ಕೆ ಸಾರ್ವಜನಿಕರು, ಕರಕುಶಲಾಭಿಮಾನಿಗಳು ಹಾಗೂ ಪ್ರವಾಸಿಗರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಗುಜರಾತಿನ ಶ್ರೀಮಂತ ಕರಕುಶಲ, ಕೈಮಗ್ಗ ಮತ್ತು ಸಾಂಸ್ಕೃತಿಕ ಪರಂಪರೆಯನ್ನು ವೀಕ್ಷಿಸಿದರು.

ಅಪರ ಜಿಲ್ಲಾಧಿಕಾರಿಗಳಾದ ಶ್ರೀಮತಿ ಆರ್. ಐಶ್ವರ್ಯ, ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಎಚ್.ಆರ್. ರಾಜಪ್ಪ, ಶ್ರೀ ಕೆ.ಎಸ್. ಟೈಲರ್, ಶ್ರೀ ಮೋತಿಲಾಲ್ ಕೃಷ್ಣ ಲಮಾಣಿ, ಶ್ರೀ ರೇವಣ್ಣಸ್ವಾಮಿ, ಶ್ರೀ ಬಿ. ಇಳಂಗೋವನ್, ಡಾ. ಸ್ನೇಹಲ್ ಮಕ್ವಾನ ಮೊದಲಾದವರು ಉಪಸ್ಥಿತರಿದ್ದರು.

# ಜಿಎಸ್‌ಟಿ ದಿನ–2026ರ ಪ್ರಬಂಧ ಸ್ಪರ್ಧೆಯಲ್ಲಿ ಬಹುಮಾನ



**ಮೈಸೂರಿನ ಊಟಿ ರಸ್ತೆಯಲ್ಲಿರುವ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನಲ್ಲಿ** ಮೈಸೂರಿನ ಜಿಎಸ್‌ಟಿ ಆಯುಕ್ತಾಲಯದ ವತಿಯಿಂದ ವಿದ್ಯಾರ್ಥಿಗಳಿಗೆ ಜಿಎಸ್‌ಟಿ ದಿನ–2026ರ ಅಂಗವಾಗಿ ಪ್ರಬಂಧ ಹಾಗೂ ಘೋಷವಾಕ್ಯ ಬರವಣಿಗೆ ಸ್ಪರ್ಧೆಯನ್ನು ಆಯೋಜಿಸಲಾಗಿತ್ತು. ಪ್ರಬಂಧ ಸ್ಪರ್ಧೆಯಲ್ಲಿ ಸ್ನಾತಕೋತ್ತರ ವಾಣಿಜ್ಯಶಾಸ್ತ್ರ ವಿಭಾಗದ ಪಿ. ಧನುಷ್, ಪ್ರಥಮ; ಎನ್.ಎಸ್. ಪ್ರಿಯಾಂಕ, ದ್ವಿತೀಯ; ಎಂ.ಆರ್. ಪ್ರಣತಿ, ತೃತೀಯ ಬಹುಮಾನವನ್ನು ಹಾಗೂ ಘೋಷವಾಕ್ಯ ಬರವಣಿಗೆ ಸ್ಪರ್ಧೆಯಲ್ಲಿ ಎಂ. ವಿದ್ಯಾಶ್ರೀ, ಪ್ರಥಮ; ಎಂ. ಮೇಘನ, ದ್ವಿತೀಯ; ಎಂ.ಆರ್. ಪ್ರಣತಿ ತೃತೀಯ ಬಹುಮಾನ ಪಡೆದುಕೊಂಡರು. ಇವರಿಗೆ ದಿನಾಂಕ 1.7.2026ರಂದು ಮೈಸೂರಿನ ಸಿದ್ಧಾರ್ಥನಗರದಲ್ಲಿರುವ ಜಿಎಸ್‌ಟಿ ಭವನದಲ್ಲಿ ನಡೆ ಕಾರ್ಯಕ್ರಮದಲ್ಲಿ ಬಹುಮಾನ ಹಾಗೂ ಪ್ರವಾಣ ಪತ್ರಗಳನ್ನು ವಿತರಿಸಲಾಯಿತು. ಬಹುವಾನ ವಿಜೇತರನ್ನು ಕಾಲೇಜಿನ ಮುಖ್ಯ ಕಾರ್ಯನಿರ್ವಾಹಕರಾದ ಪ್ರೊ. ಬಿ.ವಿ. ಸಾಂಬಶಿವಯ್ಯ ಪ್ರಾಂಶುಪಾಲರಾದ ಡಾ. ಎಂ. ಪ್ರಭು, ಸ್ನಾತಕೋತ್ತರ ವಾಣಿಜ್ಯಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಡಾ. ಎನ್. ದಿಲೀಪ್ ಹಾಗೂ ಅಧ್ಯಾಪಕರು ಅಭಿನಂದಿಸಿದರು.

ನೀವಿತ್ತ ಕೈತುತ್ತ ಸವಿದ ವಿದ್ಯಾರ್ಥಿಗಳು
ಚೀನ ಅಮೇರಿಕ ರಷ್ಯಾ ಎಲ್ಲೆಲ್ಲು ಮೆರೆದಿಹರು
ಆಗಿಬಿಟ್ಟರಿ ನೀವು ರಾಜ ರಾಜೇಂದ್ರರೇ
ಬೆಳಸಿ ಮಕ್ಕಳ ಕನಸ ನನಸಾಗಿಸಿ

- ಪ್ರೊ. ಜಿ.ಎಸ್. ಸಿದ್ಧಲಿಂಗಯ್ಯ

# ರಾಜ್ಯಮಟ್ಟದ ಮಲ್ಲಕಂಬ ಸ್ಪರ್ಧೆಯಲ್ಲಿ ಸುತ್ತೂರು ವಿದ್ಯಾರ್ಥಿಗಳ ಸಾಧನೆ



ಬೆಂಗಳೂರಿನಲ್ಲಿ ನಡೆದ ರಾಜ್ಯಮಟ್ಟದ ಮಲ್ಲಕಂಬ ಕ್ರೀಡೋತ್ಸವ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಪಡೆದ ಸುತ್ತೂರು ಜೆಎಸ್‌ಎಸ್ ಶಾಲೆಯ ವಿದ್ಯಾರ್ಥಿಗಳೊಂದಿಗೆ ಮುಖ್ಯೋಪಾಧ್ಯಾಯರುಗಳು ಹಾಗೂ ಮಲ್ಲಕಂಬ ತರಬೇತಿ ನೀಡಿದ ಶಿಕ್ಷಕರಾದ ಶ್ರೀ ದುಂಡಪ್ಪ ದಾಸನ್ ಇದ್ದಾರೆ.

ಬೆಂಗಳೂರು ನಗರ ಜಿಲ್ಲೆಯ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಹಾಗೂ ಲಕ್ಷ್ಮೇಶ್ವರದ ಕರ್ನಾಟಕ ಅಮೆಚ್ಯೂರ್ ಮಲ್ಲಕಂಬ ಅಸೋಸಿಯೇಷನ್ ಸಹಯೋಗದಲ್ಲಿ ಬೆಂಗಳೂರಿನಲ್ಲಿ ಆಯೋಜಿಸಿದ್ದ ರಾಜ್ಯಮಟ್ಟದ ಮಲ್ಲಕಂಬ ಕ್ರೀಡಾ ಸ್ಪರ್ಧೆಯಲ್ಲಿ ಸುತ್ತೂರು ಜೆಎಸ್‌ಎಸ್ ಶಾಲೆಯ 16 ಮಲ್ಲಕಂಬ ವಿದ್ಯಾರ್ಥಿಗಳು ಭಾಗವಹಿಸಿ ವೈಯಕ್ತಿಕ ಹಾಗೂ ತಂಡ ಪ್ರಶಸ್ತಿಗಳನ್ನು ಪಡೆದುಕೊಂಡಿರುತ್ತಾರೆ.

ವೈಯಕ್ತಿಕ ಸ್ಪರ್ಧೆಯಲ್ಲಿ ಮನೋಜ್ ಪ್ರಥಮ, ಸಂದೀಪ್ ಮತ್ತು ಆಯುಷ್ ದ್ವಿತೀಯ, ಸಮರ್ಥ್ ತೃತೀಯ ಸ್ಥಾನ ಗಳಿಸಿದ್ದಾರೆ.

ತಂಡ ಸ್ಪರ್ಧೆಯಲ್ಲಿ 14 ವರ್ಷದೊಳಗಿನ ಬಾಲಕರು ಹಾಗೂ 14 ವರ್ಷ ಮೇಲ್ಪಟ್ಟ ಬಾಲಕರೂ ಪ್ರಥಮ ಸ್ಥಾನ ಗಳಿಸಿದ್ದಾರೆ. 14 ವರ್ಷ ಮೇಲ್ಪಟ್ಟ ಬಾಲಕಿಯರು ತೃತೀಯ ಸ್ಥಾನ ಪಡೆದಿದ್ದಾರೆ. ಧಾರವಾಡ ಜಿಲ್ಲೆಯ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಹಾಗೂ ಲಕ್ಷ್ಮೇಶ್ವರ ಕರ್ನಾಟಕ ಅಮೆಚ್ಯೂರ್ ಮಲ್ಲಕಂಬ ಅಸೋಸಿಯೇಷನ್, ಇವರ ಸಹಯೋಗದಲ್ಲಿ ಧಾರವಾಡದಲ್ಲಿ ಆಯೋಜಿಸಿದ್ದ ರಾಜ್ಯಮಟ್ಟದ ಮಲ್ಲಕಂಬ ಕ್ರೀಡಾ ಸ್ಪರ್ಧೆಯಲ್ಲಿಯೂ ಭಾಗವಹಿಸಿ ವೈಯಕ್ತಿಕ ಹಾಗೂ ತಂಡ ಪ್ರಶಸ್ತಿಗಳನ್ನು ಪಡೆದುಕೊಂಡಿರುತ್ತಾರೆ.

ತಂಡ ಸ್ಪರ್ಧೆಯಲ್ಲಿ 14 ವರ್ಷದೊಳಗಿನ ಬಾಲಕರು

ಪ್ರಥಮ ಸ್ಥಾನ ಹಾಗೂ 14 ವರ್ಷ ಮೇಲ್ಪಟ್ಟ ಬಾಲಕರೂ ದ್ವಿತೀಯ ಸ್ಥಾನ ಗಳಿಸಿದ್ದಾರೆ. 14 ವರ್ಷ ಮೇಲ್ಪಟ್ಟ ಬಾಲಕಿಯರು ತೃತೀಯ ಸ್ಥಾನ ಪಡೆದಿದ್ದಾರೆ. ವೈಯಕ್ತಿಕ ಸ್ಪರ್ಧೆಯಲ್ಲಿ ಆಯುಷ್ ದ್ವಿತೀಯ ಸ್ಥಾನ, ಯಶವಂತ್ ತೃತೀಯ ಸ್ಥಾನ ಗಳಿಸಿದ್ದಾರೆ.

ಸಾಧನೆ ಮಾಡಿದ ವಿದ್ಯಾರ್ಥಿಗಳನ್ನು ಹಾಗೂ ತರಬೇತಿ ನೀಡಿದ ಮಲ್ಲಕಂಬ ಶಿಕ್ಷಕರಾದ ಶ್ರೀ ದುಂಡಪ್ಪ ದಾಸನ್ ಅವರನ್ನು ಸಂಸ್ಥೆಯ ಆಡಳಿತ ಮಂಡಳಿ, ಮುಖ್ಯೋಪಾಧ್ಯಾಯರುಗಳು ಹಾಗೂ ಸಿಬ್ಬಂದಿ ವರ್ಗದವರು ಅಭಿನಂದಿಸಿದ್ದಾರೆ.

## ವೈಜ್ಞಾನಿಕ ಹೈನುಗಾರಿಕೆಯಿಂದ ವರ್ಷಕ್ಕೆ ಒಂದು ಕರು




**ಸುತ್ತೂರಿನ ಐಸಿಎಆರ್ ಜೆಎಸ್ಎಸ್ ಕೃಷಿ ವಿಜ್ಞಾನ ಕೇಂದ್ರದಲ್ಲಿ** ದಿನಾಂಕ 9.7.2026ರಂದು ಪರಿಶಿಷ್ಟ ಜಾತಿಯ ರೈತರಿಗೆ ಹೈನುಗಾರಿಕೆ ತರಬೇತಿಯನ್ನು ಏರ್ಪಡಿಸಲಾಗಿತ್ತು. ಐಸಿಎಆರ್ ರಾಷ್ಟ್ರೀಯ ಪಶು ಆಹಾರ ಮತ್ತು ಶರೀರ ಕ್ರಿಯಾ ಶಾಸ್ತ್ರ ಸಂಸ್ಥೆಯ ನಿರ್ದೇಶಕರಾದ ಡಾ. ಆರತಬಂಧು ಸಾಹೋರವರು ಮಾತನಾಡಿ ರೈತರು ವೈಜ್ಞಾನಿಕ ಅಂಶಗಳನ್ನು ತಿಳಿದುಕೊಂಡು ಹೈನುಗಾರಿಕೆ ಮಾಡಿದರೆ ಹೆಚ್ಚಿನ ಲಾಭ ಗಳಿಸಬಹುದು. ರಾಸುಗಳು ಸರಿಯಾದ ಸಮಯಕ್ಕೆ ಗರ್ಭಧರಿಸಲು ಸಮತೋಲನ ಮೇವು ಮತ್ತು ಖನಿಜ ಮಿಶ್ರಣಗಳನ್ನು ನೀಡಬೇಕು. ನಮ್ಮ ಸಂಸ್ಥೆಯು ಫರ್ಟಿಮಿನ್ ಪ್ಲಸ್ ಎಂಬ ಖನಿಜ ಮಿಶ್ರಣ ತಯಾರಿಸಿದ್ದು ಗರ್ಭಧಾರಣೆ ಸಮಸ್ಯೆಯಿರುವ ಹಸುಗಳಿಗೆ ಇದನ್ನು ಪ್ರತಿದಿನ 70 ಗ್ರಾಂ ನೀಡಿದರೆ 60 ರಿಂದ 70 ದಿನಗಳೊಗೆ ಗರ್ಭಧರಿಸುತ್ತವೆ. ವರ್ಷಕ್ಕೆ ಒಂದು ಕರು ಎಂಬ ಧ್ಯೇಯದಿಂದ ಹೈನುಗಾರಿಕೆ ಮಾಡಬೇಕು ಎಂದು ತಿಳಿಸಿದರು.

ಕೃಷಿ ವಿಜ್ಞಾನ ಕೇಂದ್ರದ ಹಿರಿಯ ವಿಜ್ಞಾನಿಗಳು ಹಾಗೂ ಮುಖ್ಯಸ್ಥರಾದ ಡಾ. ಬಿ.ಎನ್ ಜ್ಞಾನೇಶ್‌ರವರು ರೈತರು ಕೃಷಿಯ ಜೊತೆಗೆ ಹೈನುಗಾರಿಕೆಯನ್ನು ಅಳವಡಿಸಿಕೊಳ್ಳಬೇಕು. ಜಾನುವಾರುಗಳಿಗೆ ಗುಣಮಟ್ಟದ ಮೇವು ನೀಡಬೇಕು ಮತ್ತು ಲಸಿಕೆಗಳನ್ನು ಹಾಕಿಸಬೇಕು. ಈಗಾಗಲೇ ಎಲ್ ನಿನೋ ಪ್ರಭಾವದಿಂದ ಶೇ 40 ರಷ್ಟು ಮಳೆ ಕೊರತೆ ಆಗಿರುವುದರಿಂದ ಜಾನುವಾರುಗಳಿಗೆ ಅವಶ್ಯವಿರುವ ಒಣ ಮೇವನ್ನು ಶೇಖರಣೆ ಮಾಡಿಕೊಳ್ಳಿ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಭಾಗವಹಿಸಿದ 31 ಮಂದಿ ರೈತರಿಗೆ ಉಚಿತವಾಗಿ 5 ಕೆಜಿ ಫರ್ಟಿಮಿನ್ ಪ್ಲಸ್ ಖನಿಜ ಮಿಶ್ರಣ ನೀಡಲಾಯಿತು. ಕಾರ್ಯಕ್ರಮದಲ್ಲಿ ಡಾ. ಕೆ.ಎಸ್. ರಾಯ್, ಡಾ. ಅರಂಗಸ್ವಾಮಿ, ಡಾ. ರಾಜೇಂದ್ರನ್, ಡಾ. ರಕ್ಷಿತ್ ರಾಜ್, ಶ್ರೀಮತಿ ದಿವ್ಯಾ, ಡಾ. ವಿನಯ್, ಡಾ. ದೀಪಕ್, ಚುಂಚನಹಳ್ಳಿ ಗ್ರಾಮದ ಪ್ರಗತಿಪರ ರೈತರಾದ ಶ್ರೀ ಮಲ್ಲೇಶ್, ಶ್ರೀ ನಗರ್ಲೆ ಶಿವಣ್ಣ ಭಾಗವಹಿಸಿದ್ದರು.

## ಫಲಿತಾಂಶ ಆಧಾರಿತ ಶಿಕ್ಷಣದಿಂದ ವಿದ್ಯಾರ್ಥಿಗಳ ಸಮಗ್ರ ಬೆಳವಣಿಗೆ




ಮೈಸೂರಿನ ಸರಸ್ವತಿಪುರಂನಲ್ಲಿರುವ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ನಡೆದ ಅಧ್ಯಾಪಕರ ಅಭಿವೃದ್ಧಿ ಕಾರ್ಯಕ್ರಮದಲ್ಲಿ ಡಾ. ಚಂದ್ರಜಿತ್ ಮೋಹನ್‌ರವರು ಮಾತನಾಡುತ್ತಿರುವುದು. (11 ಜುಲೈ 2026)

ಫಲಿತಾಂಶ ಆಧಾರಿತ ಶಿಕ್ಷಣವು ವಿದ್ಯಾರ್ಥಿಗಳ ಸಮಗ್ರ ಬೆಳವಣಿಗೆಗೆ ಗಮನ ನೀಡುತ್ತದೆ ಎಂದು ನಿಟ್ಟೆಯ ಜಸ್ಟಿಸ್ ಕೆ.ಎಸ್. ಹೆಗ್ಡೆ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಸಂಸ್ಥೆ ಸಹ ಪ್ರಾಧ್ಯಾಪಕರಾದ ಡಾ. ಚಂದ್ರಜಿತ್ ಮೋಹನ್‌ರವರು ಹೇಳಿದರು.

**ಮೈಸೂರಿನ ಸರಸ್ವತಿಪುರಂನಲ್ಲಿರುವ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ** ದಿನಾಂಕ 11.7.2026 ರಂದು ನಡೆದ 'ಫಲಿತಾಂಶ ಆಧಾರಿತ ಶಿಕ್ಷಣ ಮತ್ತು ಶೈಕ್ಷಣಿಕ ಪರಿಕರಗಳನ್ನು ಕಾರ್ಯಗತಗೊಳಿಸುವುದು' ಎಂಬ ವಿಷಯ ಕುರಿತ ಒಂದು ದಿನದ ಅಧ್ಯಾಪಕರ ಅಭಿವೃದ್ಧಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಫಲಿತಾಂಶ ಆಧಾರಿತ ಶಿಕ್ಷಣವು ವರ್ತಮಾನಕ್ಕೆ ಅನಿವಾರ್ಯವಾಗಿದ್ದು, ವೈಜ್ಞಾನಿಕವಾಗಿ ಕಾರ್ಯನಿರ್ವಹಿಸುತ್ತದೆ. ವಿದ್ಯಾರ್ಥಿಗಳ ಬೆಳವಣಿಗೆಯನ್ನು ಕೇವಲ ಅಂಕಗಳ ಆಧಾರದ ಮೇಲೆ ಮೌಲ್ಯಮಾಪನ ಮಾಡಬಾರದು. ಅಂತೆಯೇ ಅಧ್ಯಾಪಕರು ಕೃತಕ ಬುದ್ಧಿಮತ್ತೆ ಉಪಕರಣಗಳ ಕುರುಡು ಗುಲಾಮರಾಗಬಾರದು. ಇಂದಿನ ವಿದ್ಯಾರ್ಥಿಗಳ ಬುದ್ಧಿವಂತಿಕೆಗೆ ತಕ್ಕಂತೆ ಶಿಕ್ಷಕರು ಸಹ ಶೈಕ್ಷಣಿಕ ಪರಿಕರಗಳನ್ನು ಜಾಣ್ಮೆಯಿಂದ ಬಳಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಪ್ರಾಂಶುಪಾಲರಾದ ಡಾ. ರೇಚಣ್ಣ ಅಧ್ಯಕ್ಷತೆ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಪ್ರೊ. ಕಾರ್ತಿಕ್ ಕುದ್ರೋಳಿ ಮತ್ತು ಡಾ. ಶೀತಲ್ ಕುಮಾರ್, ಐಕ್ಯೂಎಸಿ ಸಂಯೋಜಕರಾದ ಶ್ರೀ ಆರ್. ಮಲ್ಲೇಶ ಹಾಗೂ ಕಾರ್ಯಕ್ರಮದ ಸಂಯೋಜಕರಾದ ಶ್ರೀ ಜಿ. ಮಹದೇವಪ್ರಸಾದ್ ಉಪಸ್ಥಿತರಿದ್ದರು. ಕಾಲೇಜಿನ ಅಧ್ಯಾಪಕ ವರ್ಗದವರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಕಾರ್ಯಕ್ರಮದಲ್ಲಿ ಹಿಂದಿ ವಿಭಾಗದ ಮುಖ್ಯಸ್ಥರಾದ ಡಾ. ಎಸ್. ಚೈತ್ರ ಪ್ರಾರ್ಥಿಸಿದರು. ಜೈವಿಕ ತಂತ್ರಜ್ಞಾನ ವಿಭಾಗದ ಮುಖ್ಯಸ್ಥರಾದ ಡಾ. ಅಭಿಜಿತ್ ಸಿಂಗ್ ಸ್ವಾಗತಿಸಿದರು. ಭೌತಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಶ್ರೀಮತಿ ಬಿ. ಸೌಮ್ಯ ವಂದಿಸಿದರು. ಆಂಗ್ಲ ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ಶ್ರೀಮತಿ ಪಿ. ವಸುಮತಿ ಕಾರ್ಯಕ್ರಮ ನಿರೂಪಿಸಿದರು.

ಉದ್ಘಾಟನೆ ನಂತರ 3 ತಾಂತ್ರಿಕ ಗೋಷ್ಠಿಗಳು ನಡೆದವು. ನಿಟ್ಟೆಯ ಜಸ್ಟಿಸ್ ಕೆ.ಎಸ್. ಹೆಗ್ಡೆ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಸಂಸ್ಥೆಯ ಸಹಾಯಕ ಪ್ರಾಧ್ಯಾಪಕರಾದ ಡಾ. ಕಾರ್ತಿಕ್ ಕುದ್ರೋಳಿಯವರು ಮೊದಲ ತಾಂತ್ರಿಕ ಗೋಷ್ಠಿಯಲ್ಲಿ 'ಫಲಿತಾಂಶ ಆಧಾರಿತ ಶಿಕ್ಷಣ' ವಿಷಯ ಕುರಿತು ಉಪನ್ಯಾಸ ನೀಡಿದರು. ಡಾ. ಚಂದ್ರಜಿತ್ ಮೋಹನ್‌ರವರು ಎರಡನೇ ತಾಂತ್ರಿಕ ಗೋಷ್ಠಿಯಲ್ಲಿ 'ಬೋಧನೆ ಮತ್ತು ಕಲಿಕೆಗಾಗಿ ಸಾಫ್ಟ್‌ವೇರ್ ಉಪಕರಣಗಳ ವರ್ಧನೆ' ಎಂಬ ವಿಷಯ ಕುರಿತು ಡಾ. ಶೀತಲ್ ಕುಮಾರ್‌ರವರು ಮೂರನೇ ತಾಂತ್ರಿಕ ಗೋಷ್ಠಿಯಲ್ಲಿ "ಕಲಿಕಾ ನಿರ್ವಹಣಾ ವ್ಯವಸ್ಥೆ: ಮೂಡಲ್ ಸಾಫ್ಟ್‌ವೇರ್" ಎಂಬ ವಿಷಯ ಕುರಿತು ವಿಚಾರ ಮಂಡಿಸಿದರು. ತಾಂತ್ರಿಕ ಗೋಷ್ಠಿಗಳ ನಂತರ ಪ್ರಾತ್ಯಕ್ಷಿಕೆ ಮತ್ತು ಸಂವಾದ ನಡೆಯಿತು.

## ನೀವು

**ಪ್ರೊ. ಮಲೆಯೂರು ಗುರುಸ್ವಾಮಿ**

ನೀವು ಹಿಮಾಚಲ ಅಲ್ಲ !
ನೀಲಿ ಸಾಗರವೂ ಅಲ್ಲ !!
ಇವೆಲ್ಲವನ್ನೂ ಒಳಗೊಂಡ
ನೀವು,
ಧರಿತ್ರಿ !!!
ಧರ್ಮದ ಕಕ್ಷೆಯಲ್ಲಿಯೇ
ನಿರಂತರ ಸುತ್ತುತ್ತಾ
ನಮ್ಮನ್ನು ಸ್ವಸ್ಥದೊಳು
ನಿಲ್ಲಿಸಿದ್ದೀರಿ:
ನಮ್ಮ ಬೇರುಗಳಿಗೆ ಫಲವತ್ತು
ನೆಲವಾಗಿ,
ರೆಂಬೆ ಕೊಂಬೆಗಳಿಗೆ ಆವರಣವಾಗಿದ್ದಿರಿ,
ಸಾವು ಯಾರಿಗೆ ಬರುವುದಿಲ್ಲ?
ಸೂರ್ಯ, ಚಂದ್ರ, ಭೂಮಿ.....ಬ್ರಹ್ಮಾಂಡಕ್ಕೂ
ಸೂರ್ಯನಿಂದ ಬಿಸುಪು ಪಡೆದದ್ದು
ಚಂದ್ರನಿಂದ ತಂಪು ಕಂಡದ್ದು
ಸುಳ್ಳಾಗಬಹುದೇ ಸಾವಿನಲ್ಲಿ !
ಇಷ್ಟಕ್ಕೂ ನೀವು ಏನಾಗಿದ್ದೀರಿ ?
ನಮ್ಮ ಕಣ್ಣಿಗೆ ಮುಂದಿದ್ದವರು
ಕಣ್ಣೊಳಗೆ ಬಂದಿದ್ದೀರಿ
ಎದೆಯೊಳಗೆ ಇಳಿದಿದ್ದೀರಿ,
ಮಾರ್ಗದರ್ಶಕರಾಗಿ ಇದುವರೆಗೆ
ಇದ್ದವರು -
ಈಗ ಮಾರ್ಗವೇ ಆಗಿದ್ದೀರಿ !!

## ಸಾಕ್ಷಿ ಚೇತನ ನೀನು

**ಪ್ರೊ. ಜಿ.ಎಚ್. ಹನ್ನೆರಡುಮಠ**

ಸಾಕ್ಷಿ ಚೇತನ ನೀನು ಶಕ್ತಿ ಕೇತನ ನೀನು
ಶಿವರಾತ್ರೀಶ್ವರನೆ ಶರಣು ಶರಣು
ಅನ್ನ ಅರುಹಿನ ಪ್ರಭುವೆ ಜ್ಞಾನ ಜಂಗಮ ವಿಭುವೆ
ಶಿವಶಿವಾ ಸದ್ಗುರುವೆ ಶರಣು ಶರಣು

ನೀನೆ ಮನುಕುಲ ದೈವ ನೀನೆ ಜನಕುಲ ಕಾವ
ನಿನ್ನಿಂದ ಮಳೆಬೆಳೆಯು ಹಸಿರು ಉಸಿರು
ಬೆಳಸಿ ಬೆಳುವೊಲ ನೀನು ಚಿಗುರು ಚಳಿಮಳೆ ನೀನು
ಮೂರು ಪಡುವಲ ಬಡಗ ನಿನ್ನ ಹೆಸರು

ಜ್ಯೋತಿ ವರ್ಷನೆ ನೀನು ರಾಜಹಂಸನೆ ನೀನು
ಮನೆಮನೆಯ ತೊಟ್ಟಿಲದ ತಾಯಿ ನೀನು
ನೋವು ಮರೆಸಿದ ತಂದೆ ನಗುವ ಮರೆಸಿದ ಗುರುವೆ
ವಿಶ್ವ ಜಂಗಮ ಯಂತ್ರ ಮಂತ್ರ ನೀನು

ಸೂರ್ಯ ಚಂದ್ರರೆ ದೀಪ ನಕ್ಷತ್ರ ಹೂಮಾಲೆ
ಕಡಲುಗಳು ಆರತಿಯು ಶರಣು ಶರಣು
ಯುಗದ ಚಕ್ರನು ನೀನು ಕಾಲ ಚಕ್ರಿಯು ನೀ
ಯುಗಕೋಟಿ ಜಗಕೋಟಿ ಶರಣು ಶರಣು

## ಸಾಂಸ್ಕೃತಿಕ ಮತ್ತು ಕ್ರೀಡಾ ವೇದಿಕೆಗಳ ಉದ್ಘಾಟನೆ




ಮೈಸೂರಿನ ವಿಜಯನಗರದ ಜೆಎಸ್‌ಎಸ್ ಪದವಿಪೂರ್ವ ಕಾಲೇಜಿನ ಸಾಂಸ್ಕೃತಿಕ ಮತ್ತು ಕ್ರೀಡಾ ವೇದಿಕೆಗಳನ್ನು ಡಾ. ಮಹೇಶ್ ಎಂ. ಚಿಕ್ಕಲ್ಲೂರುರವರು ಉದ್ಘಾಟಿಸಿದರು. (17 ಜುಲೈ 2026)

**ಮೈಸೂರಿನ ವಿಜಯನಗರದ ಜೆಎಸ್‌ಎಸ್ ಪದವಿಪೂರ್ವ ಕಾಲೇಜಿನಲ್ಲಿ** ದಿನಾಂಕ 17.7.2026ರಂದು 2026–27ನೇ ಸಾಲಿನ ಸಾಂಸ್ಕೃತಿಕ ಮತ್ತು ಕ್ರೀಡಾ ವೇದಿಕೆಗಳ ಉದ್ಘಾಟನೆ ಮತ್ತು ಸ್ವಾಗತ ಕಾರ್ಯಕ್ರಮ ಏರ್ಪಡಿಸಲಾಗಿತ್ತು. ಬೆಂಗಳೂರು ಜನಪರ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಡಾ. ಮಹೇಶ್ ಎಂ. ಚಿಕ್ಕಲ್ಲೂರುರವರು ಉದ್ಘಾಟನೆ ನೆರವೇರಿಸಿ ಮಾತನಾಡುತ್ತಾ, ವಿದ್ಯಾರ್ಥಿಗಳು ಬದುಕಿನಲ್ಲಿ ವಿದ್ಯಾಭ್ಯಾಸದ ಮಹತ್ವವನ್ನು ಅರಿಯಬೇಕು. ಸರಿಯಾದ ರೀತಿಯಲ್ಲಿ ಸದುಪಯೋಗ ಪಡಿಸಿಕೊಳ್ಳಬೇಕು ಎಂದರು.

ಶಾಲಾ ಶಿಕ್ಷಣ ವಿಭಾಗದ ಸಹ ನಿರ್ದೇಶಕರಾದ ಶ್ರೀ ಎಂ. ಶಿವಮಾದಪ್ಪ ಅಧ್ಯಕ್ಷತೆ ವಹಿಸಿದ್ದರು. ಪ್ರೌಢಶಾಲಾ ಮುಖ್ಯೋಪಾಧ್ಯಾಯರಾದ ಶ್ರೀ ಕೆ.ಎನ್. ರವಿಶಂಕರ್, ನಿವೃತ್ತ ಶಿಕ್ಷಕರಾದ ಶ್ರೀ ಪರಶಿವಮೂರ್ತಿ, ಪ್ರಾಂಶುಪಾಲರಾದ ಶ್ರೀ ಕಾಂತರಾಜ್ ಆಲನಹಳ್ಳಿ ಭಾಗವಹಿಸಿದ್ದರು. ಕು. ಸ್ನೇಹ ಸ್ವಾಗತಿಸಿದರು. ಕು. ಎಸ್. ಪ್ರಜ್ವಲ್ ವಂದಿಸಿದರು. ಶ್ರೀಮತಿ ಎಂ.ಆರ್. ದಿವ್ಯ ಕಾರ್ಯಕ್ರಮ ನಿರೂಪಿಸಿದರು.

ಅಸಾಧಾರಣ ಲೋಕಪ್ರಜ್ಞೆ, ಅನನ್ಯ ಕ್ರಿಯಾಶೀಲತೆ
ಅಪರಿಮಿತ ತಾಳ್ಮೆ; ಅಚಲ ನಿರ್ಧಾರ
ಆಧುನಿಕ ಅರಿವು; ಅಪ್ರತಿಮ ಮುನ್ನೋಟ
ಇವೆಲ್ಲವುಗಳ ಸಂಗಮ ನೀವು
ಸುತ್ತೂರು ಮಠದ ಪರಂಪರೆಯಲ್ಲಿ
ಮರೆಯಾಗದ ಶರಣ ಕಿರಣ ನೀವು!

**ಗೊ.ರು. ಚನ್ನಬಸಪ್ಪ**

## ಸಾಂಸ್ಕೃತಿಕ, ಕ್ರೀಡಾ ಹಾಗೂ ಎನ್‌ಎಸ್‌ಎಸ್ ಚಟುವಟಿಕೆಗಳ ಉದ್ಘಾಟನೆ



ಬೆಂಗಳೂರಿನ ಜಯನಗರದಲ್ಲಿರುವ ಜೆಎಸ್‌ಎಸ್ ಪದವಿಪೂರ್ವ ಕಾಲೇಜಿನ ಸಾಂಸ್ಕೃತಿಕ, ಕ್ರೀಡಾ ಹಾಗೂ ಎನ್‌ಎಸ್‌ಎಸ್ ಚಟುವಟಿಕೆಗಳನ್ನು ಶ್ರೀ ಹೊ.ನ. ನೀಲಕಂಠೇಗೌಡರವರು ಉದ್ಘಾಟಿಸಿದರು. (15 ಜೂನ್ 2026)

**ಬೆಂಗಳೂರಿನ ಜಯನಗರದಲ್ಲಿರುವ ಜೆಎಸ್‌ಎಸ್ ಪದವಿ ಪೂರ್ವ ಕಾಲೇಜಿನಲ್ಲಿ** ಸಾಂಸ್ಕೃತಿಕ, ಕ್ರೀಡಾ ಹಾಗೂ ಎನ್.ಎಸ್.ಎಸ್. ಚಟುವಟಿಕೆಗಳ ಉದ್ಘಾಟನಾ ಸಮಾರಂಭವು ದಿನಾಂಕ 15.7.2026 ರಂದು ಶ್ರೀ ಶಿವರಾತ್ರಿ ರಾಜೇಂದ್ರ ಚಿಂತನ ಮಂಟಪದಲ್ಲಿ ನಡೆಯಿತು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಪ್ರಸಿದ್ಧ ಗಮಕ ಕಲಾವಿದರಾದ ಬೆಂಗಳೂರಿನ ಶ್ರೀ ವಾಗ್ದೇವಿ ಗಮಕ ಕಲಾ ಪ್ರತಿಷ್ಠಾನದ ಕಾರ್ಯದರ್ಶಿಗಳಾದ ಶ್ರೀಮತಿ ಸಿ.ವಿ. ಶ್ರೀಮತಿಯವರು ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡುತ್ತಾ, ಕನ್ನಡ ಭಾಷೆಯ ಉಳಿವಿಗಾಗಿ, ಭಾಷಾ ಶುದ್ಧತೆಗಾಗಿ, ಕಲಿಕೆಯನ್ನು ವಿಸ್ತಾರಗೊಳಿಸಲು, ಕಾವ್ಯದ ಸೌಂದರ್ಯವನ್ನು ವಿದ್ಯಾರ್ಥಿಗಳಿಗೆ ಮನಮುಟ್ಟುವಂತೆ ವಿವರಿಸಲು ಗಮಕ ಕಲೆಯನ್ನು ಶಿಕ್ಷಣದಲ್ಲಿ ಅಳವಡಿಸಲು ಸರ್ಕಾರ ಮನಸ್ಸು ಮಾಡಬೇಕು. ಅಳಿವಿನಂಚಿನಲ್ಲಿರುವ ಗಮಕ ಕಲೆ ಉಳಿಯಬೇಕಾದರೆ ಭಾಷಾ ಶಿಕ್ಷಕರ ಉತ್ಸಾಹ ಮುಖ್ಯ ಎಂದರು. ಪ್ರಥಮ ಮತ್ತು ದ್ವಿತೀಯ ಪಿಯುಸಿ ಕನ್ನಡ ಪಠ್ಯಪುಸ್ತಕದ ಹಳೆಗನ್ನಡದ ಪದ್ಯಗಳನ್ನು ಗಮಕ ಗಾಯನ ಮಾಡಿ ವಾಚಿಸಿದರು.

ಬೆಂಗಳೂರು ದಕ್ಷಿಣ ಜಲ್ಲೆಯ ಶಾಲಾ ಶಿಕ್ಷಣ ಇಲಾಖೆಯ ಸಹಾಯಕ ನಿರ್ದೇಶಕರು, ನವದೆಹಲಿಯ ಕೇಂದ್ರ ಸಾಹಿತ್ಯ ಅಕಾಡೆಮಿ ಮತ್ತು ಕನ್ನಡ ಸಲಹಾ ಮಂಡಳಿ ಸದಸ್ಯರಾದ ಶ್ರೀ ಹೊ.ನ. ನೀಲಕಂಠೇಗೌಡರವರು ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡುತ್ತಾ, ಏಳು ವರ್ಷಗಳ ಕಾಲ ಶ್ರದ್ಧೆಯಿಂದ ಕಲಿತರೆ ಎಪ್ಪತ್ತು ವರ್ಷಗಳ ಕಾಲ ಸುಖವಾಗಿ ಹಾಗೂ ಯಶಸ್ವಿಯಾಗಿ ಬದುಕಬಹುದು. ಯಾವುದೇ ದುಶ್ಚಟಗಳಿಗೆ ಬಲಿಯಾಗದೆ ವಿದ್ಯೆಯ ಕಡೆ

ಗಮನ ನೀಡಿ. ತಂದೆ, ತಾಯಿ ಮತ್ತು ಗುರು ನಿಮ್ಮ ಆದರ್ಶ ವ್ಯಕ್ತಿಗಳಾಗಲಿ. ತರಗತಿಗಳ ಪಾಠವೊಂದೇ ನಮ್ಮ ವ್ಯಕ್ತಿತ್ವ ರೂಪಿಸುವುದಿಲ್ಲ, ವ್ಯಕ್ತಿತ್ವದ ಸರ್ವಾಂಗೀಣ ಅಭಿವೃದ್ಧಿಗೆ ಸಹಪಠ್ಯ ಚಟುವಟಿಕೆಗಳು ಸಹ ಮುಖ್ಯವಾಗಿವೆ. ವಿಶೇಷ ಪ್ರತಿಭಾ ಸಂಪತ್ತು ಅನಾವರಣವಾಗುವುದು ಇಂತಹ ಸಾಂಸ್ಕೃತಿಕ, ಕ್ರೀಡಾ, ಎನ್.ಎಸ್.ಎಸ್. ಚಟುವಟಿಕೆಗಳಿಂದ. ಹಾಗಾಗಿ ಇಂತಹ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡು ದೇಶದ ಉತ್ತಮ ನಾಗರಿಕರಾಗಿರಿ ಎಂದು ಹೇಳಿದರು.

2025– 2026ನೆಯ ಶೈಕ್ಷಣಿಕ ಸಾಲಿನಲ್ಲಿ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕಗಳನ್ನು ಪಡೆದ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ಕು. ದೀಪಶ್ರೀ ಹಾಗೂ ಕು. ಶ್ವೇತರವರು ಪ್ರಾರ್ಥಿಸಿದರು, ಕು. ಸಮೃದ್ಧಿ ಸ್ವಾಗತಿಸಿದರು, ಪ್ರಾಂಶುಪಾಲರಾದ ಶ್ರೀ ಬ್ಯಾ. ರಾ. ಪ್ರಸನ್ನಕುಮಾರ್‌ರವರು ಪ್ರಾಸ್ತಾವಿಕ ನುಡಿಗಳನ್ನಾಡಿದರು, ಶ್ರೀ ಸುನಿಲ್ ಕುಮಾರ್. 2026–2027ನೆಯ ಸಾಲಿನ ಮುನ್ನೋಟ ಓದಿದರು. ನಂತರ ವಿದ್ಯಾರ್ಥಿಗಳಿಂದ ವೈವಿಧ್ಯಮಯ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು.

☐



ಸುತ್ತೂರಿನ ಜೆಎಸ್‌ಎಸ್ ಪ್ರೌಢಶಾಲೆಯಲ್ಲಿ ಎನ್‌ಸಿಸಿ ವಾಯುದಳದ ವಾರ್ಷಿಕ ಚಟುವಟಿಕೆಗಳಿಗೆ ಎನ್‌ಸಿಸಿ ಅಧಿಕಾರಿಗಳಾದ ಜೂನಿಯರ್ ವಾರಂಟ್ ಆಫೀಸರ್ ಶ್ರೀ ವಿಜೇತ ಕೆ. ಮಿಶ್ರಾ ಹಾಗೂ ಸಾರ್ಜೆಂಟ್ ಸುಧಾಂಶುರವರು ಕೆಡೆಟ್‌ಗಳಿಗೆ ಹಸಿರು ನಿಶಾನೆ ನೀಡುವುದರ ಮೂಲಕ ಚಾಲನೆ ನೀಡಿದರು. ಚಿತ್ರದಲ್ಲಿ ಜೆಎಸ್‌ಎಸ್ ಪ್ರೌಢಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀ ಮ.ಗು. ಬಸವಣ್ಣ ಹಾಗೂ ಎನ್‌ಸಿಸಿ ಅಧಿಕಾರಿ ಶ್ರೀ ಕೆ.ಎಸ್. ಮಲ್ಲೇಶ್‌ರವರಿದ್ದಾರೆ.

# ಅಡಿಕೆ ಆಧಾರಿತ ಮಿಶ್ರ ಬೆಳೆ ಪದ್ಧತಿಗಳ ಕುರಿತು ತರಬೇತಿ




ಸುತ್ತೂರಿನ ಐಸಿಎಆರ್–ಜೆಎಸ್‌ಎಸ್ ಕೃಷಿ ವಿಜ್ಞಾನ ಕೇಂದ್ರದಲ್ಲಿ ನಡೆದ 'ಅಡಿಕೆ ಆಧಾರಿತ ಮಿಶ್ರ ಬೆಳೆ ಪದ್ಧತಿಗಳು' ವಿಷಯ ಕುರಿತ ತರಬೇತಿ ಕಾರ್ಯಕ್ರಮವನ್ನು ಮೈಸೂರಿನ ಸಿಟಿಆರ್‌ಐ ನಿವೃತ್ತ ಪ್ರಧಾನ ವಿಜ್ಞಾನಿಗಳಾದ ಡಾ. ಮಹದೇವಸ್ವಾಮಿಯವರು ಉದ್ಘಾಟಿಸುತ್ತಿರುವುದು. (20 ಜುಲೈ 2026)

**ಸುತ್ತೂರಿನ ಐಸಿಎಆರ್–ಜೆಎಸ್‌ಎಸ್ ಕೃಷಿ ವಿಜ್ಞಾನ ಕೇಂದ್ರದಲ್ಲಿ** ದಿನಾಂಕ 20.7.2026ರಂದು ಎಸ್ಸಿ ಎಸ್ಪಿ ಯೋಜನೆಯಡಿಯಲ್ಲಿ 'ಅಡಿಕೆ ಆಧಾರಿತ ಮಿಶ್ರ ಬೆಳೆ ಪದ್ಧತಿಗಳು' ಕುರಿತು ಒಂದು ದಿನದ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ಮೈಸೂರಿನ ಸಿಟಿಆರ್‌ಐ ನಿವೃತ್ತ ಪ್ರಧಾನ ವಿಜ್ಞಾನಿಗಳಾದ ಡಾ. ಮಹದೇವಸ್ವಾಮಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ, ಅಡಿಕೆಯು ರೈತರಿಗೆ ಉತ್ತಮ ಆದಾಯ ತಂದುಕೊಡುವ ಪ್ರಮುಖ ವಾಣಿಜ್ಯ ಬೆಳೆಯಾಗಿದೆ. ನೀರಿನ ಲಭ್ಯತೆಯನ್ನು ಪರಿಗಣಿಸಿ ಯೋಜಿತವಾಗಿ ಬೆಳೆಯಬೇಕು. ಅಡಿಕೆ ತೋಟಗಳಲ್ಲಿ ಮಣ್ಣಿನ ತೇವಾಂಶವನ್ನು ಕಾಪಾಡಲು ಮಲ್ಚಿಂಗ್ ಅಳವಡಿಸಿಕೊಳ್ಳುವುದು, ಮಳೆನೀರು ಸಂಗ್ರಹಣೆ ಹಾಗೂ ನೀರಿನ ಸಮರ್ಪಕ ಬಳಕೆಗೆ ಆದ್ಯತೆ ನೀಡುವುದು ಅವಶ್ಯಕವಾಗಿದೆ. ಅಡಿಕೆ ತೋಟದಲ್ಲಿ ಕೇವಲ ಏಕಬೆಳೆ ಪದ್ಧತಿಯನ್ನು ಅನುಸರಿಸದೆ ಅಂತರ ಬೆಳೆ ಹಾಗೂ ಮಿಶ್ರ ಬೆಳೆಗಳನ್ನು ಅಳವಡಿಸಿಕೊಳ್ಳುವುದರಿಂದ ಹೆಚ್ಚುವರಿ ಆದಾಯದ ಜೊತೆಗೆ ಭೂಮಿಯ ಫಲವತ್ತತೆ, ಜೈವಿಕ ವೈವಿಧ್ಯತೆ ಹಾಗೂ ತೋಟದ ಸುಸ್ಥಿರತೆ ಕಾಪಾಡಬಹುದು ಎಂದು ತಿಳಿಸಿದರು.

ಕೃಷಿ ವಿಜ್ಞಾನ ಕೇಂದ್ರದ ಹಿರಿಯ ವಿಜ್ಞಾನಿ ಹಾಗೂ ಮುಖ್ಯಸ್ಥರಾದ ಡಾ. ಬಿ.ಎನ್. ಜ್ಞಾನೇಶ್ ಮಾತನಾಡಿ, ತೋಟಗಾರಿಕಾ ಬೆಳೆಗಳಲ್ಲಿ ಅಡಿಕೆಯು ಅತ್ಯಂತ ಲಾಭದಾಯಕ ಬೆಳೆಯಾಗಿದ್ದರೂ, ಏಕಬೆಳೆ ಪದ್ಧತಿಯಿಂದ ಹಲವು ಸಮಸ್ಯೆಗಳು ಎದುರಾಗುವ ಸಾಧ್ಯತೆ ಇದೆ. ಆದ್ದರಿಂದ ರೈತರು ಅಂತರ ಹಾಗೂ ಮಿಶ್ರ ಬೆಳೆ ಪದ್ಧತಿಯನ್ನು ಅಳವಡಿಸಿಕೊಳ್ಳುವ ಮೂಲಕ ಆರ್ಥಿಕ ನಷ್ಟವನ್ನು ಕಡಿಮೆ ಮಾಡಿಕೊಂಡು ನಿರಂತರ

ಆದಾಯವನ್ನು ಪಡೆಯಬಹುದು. ತೋಟಗಾರಿಕೆ ಬೆಳೆಗಳಲ್ಲಿ ನೀರಿನ ಅಂಶವನ್ನು ಕಾಪಾಡಿಕೊಳ್ಳುವುದು ಬಹಳ ಮುಖ್ಯ. ಆದಕಾರಣ ಗಿಡಗಳಿಗೆ ಹೊದಿಕೆ ಮಾಡುವುದನ್ನು ರೂಢಿಸಿಕೊಳ್ಳಬೇಕು. ಇದು ಗಿಡಗಳ ಸುತ್ತ ಮಣ್ಣಿನ ತೇವಾಂಶವನ್ನು ಸಂರಕ್ಷಿಸುವುದಲ್ಲದೇ ಸೂರ್ಯನ ಬೆಳಕನ್ನು ತಡೆಯುವ ಮೂಲಕ ಕಳೆಗಳನ್ನು ನಿಗ್ರಹಿಸುತ್ತದೆ. ಹೆಚ್ಚಿನ ಮಾಹಿತಿಗಾಗಿ ರೈತರು ಕೃಷಿ ವಿಜ್ಞಾನ ಕೇಂದ್ರದ ವಿಜ್ಞಾನಿಗಳ ಮಾರ್ಗದರ್ಶನ ಹಾಗೂ ವೈಜ್ಞಾನಿಕ ಶಿಫಾರಸ್ಸುಗಳನ್ನು ಅನುಸರಿಸಿ ಆಧುನಿಕ ಕೃಷಿ ತಂತ್ರಜ್ಞಾನಗಳನ್ನು ಅಳವಡಿಸಿಕೊಳ್ಳಬೇಕು ಎಂದು ಕರೆ ನೀಡಿದರು.

ಕಾರ್ಯಕ್ರಮದ ಸಂಪನ್ಮೂಲ ವ್ಯಕ್ತಿಯಾಗಿ ಪಾಲ್ಗೊಂಡಿದ್ದ ಅರಸೀಕೆರೆಯ ಕೃಷಿ ಸಂಶೋಧನಾ ಕೇಂದ್ರದ ಮುಖ್ಯಸ್ಥರು ಹಾಗೂ ತೋಟಗಾರಿಕಾ ವಿಜ್ಞಾನಿಗಳಾದ ಡಾ. ಎಂ.ವಿ. ಭರತ್ ಕುಮಾರ್ ಅಡಿಕೆ ಬೆಳೆಯ ವೈಜ್ಞಾನಿಕ ಬೇಸಾಯ ಕ್ರಮಗಳ ಕುರಿತು ಸಮಗ್ರ ಮಾಹಿತಿ ನೀಡಿದರು. ಅಡಿಕೆಗೆ ಸೂಕ್ತವಾದ ಮಣ್ಣು ಮತ್ತು ಹವಾಮಾನ, ಸುಧಾರಿತ ತಳಿಗಳು, ಗುಣಮಟ್ಟದ ನರ್ಸರಿ ಸ್ಥಾಪನೆ, ತಾಯಿ ಮರಗಳ ಆಯ್ಕೆ, ಭೂಮಿ ಸಿದ್ಧತೆ, ಅಂತರ, ಗಿಡಗಳ ನಾಟಿ, ನೀರಾವರಿ ನಿರ್ವಹಣೆ, ಸಮಗ್ರ ಪೋಷಕಾಂಶ ನಿರ್ವಹಣೆ, ಸಮಗ್ರ ಕೀಟ ಹಾಗೂ ರೋಗಗಳ ನಿರ್ವಹಣೆ ಸೇರಿದಂತೆ ಉತ್ಪಾದನೆ ಹೆಚ್ಚಿಸುವ ವಿವಿಧ ತಾಂತ್ರಿಕ ಅಂಶಗಳನ್ನು ವಿವರಿಸಿದರು.

ಕಾರ್ಯಕ್ರಮದಲ್ಲಿ ಮೈಸೂರಿನ ಪ್ರಗತಿಪರ ರೈತರಾದ ಡಾ. ಚಂದ್ರಚೂಡ ಹಾಗೂ ಮೈಸೂರಿನ ನಿವೃತ್ತ ಪ್ರಾದೇಶಿಕ ಅರಣ್ಯ ಅಧಿಕಾರಿಗಳಾದ ಶ್ರೀ ಹುಚ್ಚಯ್ಯ ವಿಶೇಷ ಅತಿಥಿಗಳಾಗಿ ಭಾಗವಹಿಸಿದ್ದರು. ಕೃಷಿ ವಿಜ್ಞಾನ ಕೇಂದ್ರದ ವಿಜ್ಞಾನಿಗಳಾದ ಡಾ. ವಿನಯ್, ಡಾ. ಪ್ರಸಾದ್, ಡಾ. ದೀಪಕ್, ಡಾ. ರಕ್ಷಿತ್, ಶ್ರೀಮತಿ ದಿವ್ಯಾ ಹಾಗೂ ಶ್ರೀ ಶಾಮರಾಜ್ ಉಪಸ್ಥಿತರಿದ್ದರು. ಮೈಸೂರು, ಮಂಡ್ಯ ಹಾಗೂ ಚಾಮರಾಜನಗರ ಜಿಲ್ಲೆಗಳ 120ಕ್ಕೂ ಹೆಚ್ಚು ರೈತರು ಮತ್ತು ರೈತ ಮಹಿಳೆಯರು ಕಾರ್ಯಕ್ರಮದಲ್ಲಿ ಭಾಗವಹಿಸಿ ವೈಜ್ಞಾನಿಕ ಮಾಹಿತಿ ಪಡೆದು ತರಬೇತಿಯ ಸದುಪಯೋಗವನ್ನು ಪಡೆದುಕೊಂಡರು.



ಸುತ್ತೂರು ಶ್ರೀಮಠದಲ್ಲಿ ಜರುಗಿದ 135ನೇ ಮಾಸಿಕ ಸಾಮೂಹಿಕ ವಿವಾಹದಲ್ಲಿ ಹನ್ನೊಂದು ಜೋಡಿಗಳು ಸತಿಪತಿಗಳಾದರು. ಚಿತ್ರದಲ್ಲಿ ಸಂಸ್ಥೆಯ ಮುಖ್ಯಸ್ಥರುಗಳಿದ್ದಾರೆ. (5 ಜುಲೈ 2026)

## ವಿಜ್ಞಾನ ಮತ್ತು ನಾವೀನ್ಯತೆ ಒಂದು ನಾಣ್ಯದ ಎರಡು ಮುಖಗಳು




ಮೈಸೂರಿನ ಸರಸ್ವತಿಪುರಂನಲ್ಲಿರುವ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ನಡೆದ ರಾಜ್ಯಮಟ್ಟದ ವಿಚಾರಸಂಕಿರಣದಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ. ಎನ್.ಕೆ. ಲೋಕನಾಥ್‌ರವರು ಮಾತನಾಡುತ್ತಿರುವುದು. (20 ಜುಲೈ 2026)

ವಿಜ್ಞಾನ ಮತ್ತು ನಾವೀನ್ಯತೆ ಒಂದು ನಾಣ್ಯದ ಎರಡು ಮುಖಗಳು, ಇವುಗಳನ್ನು ಬೇರ್ಪಡಿಸಲು ಸಾಧ್ಯವಿಲ್ಲ. ಎಂದು ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿಗಳಾದ ಪ್ರೊ. ಎನ್.ಕೆ. ಲೋಕನಾಥ್‌ರವರು ಹೇಳಿದರು.

**ಮೈಸೂರಿನ ಸರಸ್ವತಿಪುರಂನಲ್ಲಿರುವ ಜೆಎಸ್‌ಎಸ್ ಮಹಿಳಾ ಕಾಲೇಜಿನ** ಭೌತಶಾಸ್ತ್ರ ವಿಭಾಗದ ವತಿಯಿಂದ ದಿನಾಂಕ 20.7.2026ರಂದು ನಡೆದ 'ಬಾಹ್ಯಾಕಾಶ ಗಡಿಗಳು: ನಾವೀನ್ಯತೆ, ಪರಿಶೋಧನೆ ಮತ್ತು ಅನ್ವೇಷಣೆ' ವಿಷಯ ಕುರಿತ ಒಂದು ದಿನದ ರಾಜ್ಯಮಟ್ಟದ ವಿಚಾರ ಸಂಕಿರಣವನ್ನು ಉದ್ಘಾಟಿಸಿ ಅವರು ಮಾತನಾಡಿದರು. ವಿಜ್ಞಾನದಲ್ಲಿ ತೀಕ್ಷ್ಣವಾದ ವೀಕ್ಷಣೆ ಬಹುಮುಖ್ಯವಾಗಿದೆ. ನಾವೀನ್ಯತೆಯನ್ನು ಮೂಡಿಸಲು ವಿದ್ಯಾರ್ಥಿಗಳು ಜಗತ್ತನ್ನು ಸೂಕ್ಷ್ಮವಾಗಿ ವೀಕ್ಷಿಸಬೇಕಾಗಿದೆ. ಪ್ರಕೃತಿ ನಮ್ಮ ಅತ್ಯುತ್ತಮ ಶಿಕ್ಷಕಿಯಾಗಿದ್ದು, ಮಾನವ ಕುಲವೂ ನಿರಂತರವಾಗಿ ಕಲಿಯಲು ಮತ್ತು ವಿಕಸನಗೊಳ್ಳಲು ಸದಾ ಪ್ರೇರೇಪಿಸುತ್ತದೆ. ವಿದ್ಯಾರ್ಥಿಗಳು ನಾವೀನ್ಯತೆಯು ನಿಜವಾದ ಮನೋಭಾವವನ್ನು ಆಳವಾಗಿ ಅರ್ಥಮಾಡಿಕೊಳ್ಳಲು ಮೂಲ ಪಠ್ಯಪುಸ್ತಕಗಳನ್ನು ಓದಬೇಕು. ಜೊತೆಗೆ ಶ್ರೇಷ್ಠ ವಿಜ್ಞಾನಿಗಳ ಜೀವನದ ಸಾಧನೆಗಳನ್ನು ಸತತ ಅಧ್ಯಯನ ಮಾಡಬೇಕಿದೆ ಎಂದರು.

ಬೆಂಗಳೂರಿನ ಇಸ್ರೋದ ನಿವೃತ್ತ ಹಿರಿಯ ಬಾಹ್ಯಾಕಾಶ ವಿಜ್ಞಾನಿಯಾದ ಶ್ರೀ ಆರ್. ಶಶಿಶೇಖರ್‌ರವರು ಮಾತನಾಡಿ, ಬಾಹ್ಯಾಕಾಶಕ್ಕೆ ಯಾವುದೇ ಗಡಿಗಳು ಇರುವುದಿಲ್ಲ. ಅದು ಯಾವುದೇ ತಪ್ಪುಗಳನ್ನು ಕ್ಷಮಿಸುವುದಿಲ್ಲ. ವಿಜ್ಞಾನದಲ್ಲಿ ಕುತೂಹಲವು ಬೆರೆತಾಗ ನಿಜವಾದ ಅನ್ವೇಷಣೆ ಮತ್ತು ನಾವೀನ್ಯತೆ ಸಾಧ್ಯ. ವಿದ್ಯಾರ್ಥಿ ಸಮೂಹ ಸೋಲಿನ ಭಯವಿಲ್ಲದೆ ವಿಶಿಷ್ಟ ರೀತಿಯಲ್ಲಿ ನಾವೀನ್ಯತೆಗೆ ಕೊಡುಗೆ ನೀಡಬೇಕಿದೆ. ಪಠ್ಯಕ್ರಮವನ್ನು

ವಿದ್ಯಾರ್ಥಿಗಳ ನಾಳಿನ ಭವಿಷ್ಯಕ್ಕಾಗಿ ಕ್ರಿಯಾತ್ಮಕವಾಗಿ ರೂಪಿಸಬೇಕಿದೆ ಎಂದರು.

ಕಾಲೇಜು ಶಿಕ್ಷಣ ಇಲಾಖೆಯ ಪ್ರಾದೇಶಿಕ ಕಛೇರಿಯ ಜಂಟಿ ನಿರ್ದೇಶಕರಾದ ಡಾ. ಡಿ.ಎಸ್. ಪ್ರತಿಮಾರವರು, ಬಾಹ್ಯಾಕಾಶ ಸಂಶೋಧನೆ ಒಂದು ಕ್ಷೇತ್ರಕ್ಕೆ ಸೀಮಿತವಾಗಿರದೆ, ಪ್ರಸ್ತುತ ಯುಗದ ಎಲ್ಲಾ ಜ್ಞಾನ ಶಿಸ್ತುಗಳ ಜೊತೆಗೆ ಅವಿನಾಭಾವ ಸಂಬಂಧ ಹೊಂದಿದೆ. ಮೂಲ ವಿಜ್ಞಾನವು ಎಲ್ಲಾ ವೈಜ್ಞಾನಿಕ ಪ್ರಗತಿಗಳ ಅಡಿಪಾಯವಾಗಿದೆ. ಇಂತಹ ವಿಚಾರ ಸಂಕಿರಣಗಳು ವಿದ್ಯಾರ್ಥಿಗಳಲ್ಲಿ ಸಂಶೋಧನಾ ಪ್ರವೃತ್ತಿ ಮತ್ತು ವಿಮರ್ಶಾತ್ಮಕ ಚಿಂತನೆಯನ್ನು ಕಲಿಯಲು ಸಹಾಯಕವಾಗಿದೆ ಎಂದು ತಿಳಿಸಿದರು.

ಮೈಸೂರು ವಿಜ್ಞಾನ ಪ್ರತಿಷ್ಠಾನದ ಅಧ್ಯಕ್ಷರಾದ ಶ್ರೀ ಪಿ. ಕೃಷ್ಣೇಗೌಡರವರು ಕಾರ್ಯಕ್ರಮದಲ್ಲಿ ಅತಿಥಿಯಾಗಿ ಭಾಗವಹಿಸಿದ್ದರು.

ಪ್ರಾಚಾರ್ಯರಾದ ಡಾ. ರೇಚಣ್ಣ, ಭೌತಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಶ್ರೀಮತಿ ಬಿ. ಸೌಮ್ಯ ಉಪಸ್ಥಿತರಿದ್ದರು. ಅಧ್ಯಾಪಕರು ಮತ್ತು ಸಿಬ್ಬಂದಿ ವರ್ಗದವರು ಭಾಗವಹಿಸಿದ್ದರು.

ಕು. ಧಾತ್ರಿ ಮತ್ತು ವೃಂದದವರು ಪ್ರಾರ್ಥಿಸಿದರು. ಕು. ಸೌಜನ್ಯ ಸ್ವಾಗತಿಸಿದರು. ಕು. ದೀಕ್ಷಾ ವಂದಿಸಿದರು. ಕು. ವಂದನಾ ಎಂ. ಯೋಗೇಶ್ ಕಾರ್ಯಕ್ರಮ ನಿರೂಪಿಸಿದರು.

ಉದ್ಘಾಟನಾ ಕಾರ್ಯಕ್ರಮದ ನಂತರ ಮೂರು ತಾಂತ್ರಿಕ ಗೋಷ್ಠಿಗಳು ನಡೆದವು. ಮೊದಲ ತಾಂತ್ರಿಕ ಗೋಷ್ಠಿಯಲ್ಲಿ ಇಸ್ರೋದ ನಿವೃತ್ತ ಹಿರಿಯ ಬಾಹ್ಯಾಕಾಶ ವಿಜ್ಞಾನಿಗಳಾದ ಶ್ರೀ ಆರ್. ಶಶಿಶೇಖರ್‌ರವರು 'ಬಾಹ್ಯಾಕಾಶ ಕಾರ್ಯಾಚರಣೆಗಳು ಮತ್ತು ಸವಾಲುಗಳು' ವಿಷಯ ಕುರಿತು, ಎರಡನೇ ತಾಂತ್ರಿಕ ಗೋಷ್ಠಿಯಲ್ಲಿ ಮೈಸೂರಿನ ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜಿನ ಭೌತಶಾಸ್ತ್ರ ಸ್ನಾತಕೋತ್ತರ ವಿಭಾಗದ ಪ್ರಾಧ್ಯಾಪಕರಾದ ಡಾ. ಟಿ. ಶಿವಲಿಂಗಸ್ವಾಮಿರವರು 'ನಕ್ಷತ್ರಗಳ ಜೀವನ ಚಕ್ರ' ವಿಷಯ ಕುರಿತು, ಅಂತಿಮ ತಾಂತ್ರಿಕ ಗೋಷ್ಠಿಯಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಮಾನಸಗಂಗೋತ್ರಿಯ ವಿಜ್ಞಾನ ಭವನದಲ್ಲಿರುವ ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಆಸ್ಟ್ರೋಫಿಸಿಕ್ಸ್‌ನ ಕಾಸ್ಮೋಸ್ ಯೋಜನಾ ಸಹವರ್ತಿಗಳಾದ ಶ್ರೀ ಎನ್. ಅಮೋಘವರ್ಷರವರು "ಇಪ್ಪತ್ತೊಂದನೇ ಶತಮಾನದ ದೂರದರ್ಶಕಗಳು" ವಿಷಯ ಕುರಿತು ಮಾತನಾಡಿದರು.

---

**ಜೆಎಸ್‌ಎಸ್ ವಾರ್ತಾಪತ್ರಕ್ಕೆ ಕಳುಹಿಸುವ**
**ವರದಿಗಳು ಮತ್ತು ಛಾಯಾಚಿತ್ರಗಳನ್ನು ಕಡ್ಡಾಯವಾಗಿ**
**varthapathra@jssonline.org ಗೆ ಮಾತ್ರ ಕಳುಹಿಸುವುದು.**
**ಬೇರೆ ಯಾವುದೇ ಇಮೇಲ್‌ಗೆ ಕಳುಹಿಸಬಾರದು.**

**ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ**
**ಪ್ರಕಟಣ ವಿಭಾಗ, ಜೆಎಸ್‌ಎಸ್ ಮಹಾವಿದ್ಯಾಪೀಠ, ಮೈಸೂರು**
**ದೂರವಾಣಿ : 9663151846, 9480771995**
**8861654566, 9964161363**

# ಕೃಷಿಯಲ್ಲಿ ಸೌರ ವಿದ್ಯುತ್ ಬಳಕೆಯ ಕಾರ್ಯಾಗಾರ




ಸುತ್ತೂರಿನ ಐಸಿಎಆರ್ ಜೆಎಸ್‌ಎಸ್ ಕೃಷಿ ವಿಜ್ಞಾನ ಕೇಂದ್ರದಲ್ಲಿ ನಡೆದ ಕೃಷಿಯಲ್ಲಿ ಸೌರ ವಿದ್ಯುತ್ ಬಳಕೆಯ ಕುರಿತಾದ ಕಾರ್ಯಾಗಾರವನ್ನು ಬೆಂಗಳೂರಿನ ಐಸಿಎಆರ್ ಕೃಷಿ ತಂತ್ರಜ್ಞಾನ ಅನ್ವಯಿಸುವಿಕೆ ಸಂಶೋಧನಾ ಸಂಸ್ಥೆಯ ಪ್ರಧಾನ ವಿಜ್ಞಾನಿಗಳಾದ ಡಾ. ಎಂ.ಜೆ. ಚಂದ್ರೇಗೌಡರವರು ಉದ್ಘಾಟಿಸಿದರು. (29 ಜುಲೈ 2026)

**ಸುತ್ತೂರಿನ ಐಸಿಎಆರ್ ಜೆಎಸ್‌ಎಸ್ ಕೃಷಿ ವಿಜ್ಞಾನ ಕೇಂದ್ರದಲ್ಲಿ** ಭಾರತೀಯ ಕೃಷಿ ಕೌಶಲ್ಯ ಮಂಡಳಿ ಹಾಗೂ ಭಾರತದ ರಾಷ್ಟ್ರೀಯ ಕೌಶಲ್ಯ ಪ್ರತಿಷ್ಠಾನಗಳ ಸಂಯುಕ್ತಾಶ್ರಯದಲ್ಲಿ ಕೃಷಿಯಲ್ಲಿ ಸೌರ ವಿದ್ಯುತ್ ಬಳಕೆಯ ಕುರಿತಾದ ಕಾರ್ಯಾಗಾರವನ್ನು ದಿನಾಂಕ 29.7.2026ರಂದು ಆಯೋಜಿಸಲಾಗಿತ್ತು. ಬೆಂಗಳೂರಿನ ಐಸಿಎಆರ್ ಕೃಷಿ ತಂತ್ರಜ್ಞಾನ ಅನ್ವಯಿಸುವಿಕೆ ಸಂಶೋಧನಾ ಸಂಸ್ಥೆಯ ಪ್ರಧಾನ ವಿಜ್ಞಾನಿಗಳಾದ ಡಾ. ಎಂ.ಜೆ. ಚಂದ್ರೇಗೌಡರವರು ಕಾರ್ಯಕ್ರಮವನ್ನು ಉದ್ಘಾಟಿಸಿ, ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ರೈತರ ಕಲ್ಯಾಣಕ್ಕೆ ವಿವಿಧ ಯೋಜನೆಗಳನ್ನು ಹಮ್ಮಿಕೊಂಡಿವೆ. ರೈತರು ಸದರಿ ಯೋಜನೆಗಳನ್ನು ಸದುಪಯೋಗಪಡಿಸಿಕೊಳ್ಳಬೇಕು. ರೈತರು ಕೃಷಿ ಸಂಪನ್ಮೂಲವನ್ನು ಸಮರ್ಪಕವಾಗಿ ಬಳಸಿಕೊಂಡು ಆದಾಯವನ್ನು ಹೆಚ್ಚಿಸಿಕೊಳ್ಳಬೇಕು. ಅದಕ್ಕಾಗಿ ಬೆಳೆ ಉತ್ಪಾದಕತೆಯನ್ನು ಹೆಚ್ಚಿಸಿಕೊಳ್ಳುವುದು, ಕೃಷಿ ಬೆಳೆಯನ್ನು ಬೆಳೆಯುವ ಮುಂಚೆ ವೆಚ್ಚದ ಯೋಜನೆಯನ್ನು ಹಾಕಿಕೊಳ್ಳುವುದು, ಏಕ ಬೆಳೆಯನ್ನು ಬೆಳೆಯದೆ, ವಿವಿಧ ಬೆಳೆಗಳನ್ನು ಬೆಳೆಯಲು ಯೋಜಿಸುವುದು ಹಾಗೂ ಉಪಕಸುಬುಗಳಾದ ಹೈನುಗಾರಿಕೆ, ಕೋಳಿ–ಕುರಿ ಸಾಕಾಣಿಕೆ, ರೇಷ್ಮೆ ಹುಳು ಸಾಕಾಣಿಕೆ ಮುಂತಾದ ನಿರಂತರ ಆರ್ಥಿಕ ಸಂಪನ್ಮೂಲದ ಕುರಿತು ಕ್ರಮ ವಹಿಸಬೇಕು ಎಂದರು.

ಬೆಂಗಳೂರು ದಕ್ಷಿಣದ ಭಾರತೀಯ ಕೃಷಿ ಕೌಶಲ್ಯ ಮಂಡಳಿ ಪ್ರಾದೇಶಿಕ ಮುಖ್ಯಸ್ಥರಾದ ಶ್ರೀ ಎಂ. ಪುರುಷೋತ್ತಮಗೌಡರವರು ಮಾತನಾಡಿ, ರೈತರಿಗಾಗಿ ಕೃಷಿಯಲ್ಲಿ ಸೌರವಿದ್ಯುತ್ ಬಳಕೆ ಕುರಿತ ತರಬೇತಿಯನ್ನು ರಾಜ್ಯಾದ್ಯಂತ ಆಯೋಜಿಸಲಾಗಿದೆ. ರೈತರು ತಮ್ಮ ಕೃಷಿ ಜಮೀನಿನಲ್ಲಿ ತಮಗೆ ಬೇಕಾದ ಸೌರವಿದ್ಯುತ್ತನ್ನು ಪಡೆಯುವುದು ಹಾಗೂ ಬಂಜರು ಭೂಮಿಯಲ್ಲಿ ಹೆಚ್ಚಿನ

ಸೌರವಿದ್ಯುತ್ ಘಟಕವನ್ನು ಅಳವಡಿಸಿಕೊಂಡು ವಿದ್ಯುತ್ತನ್ನು ಮಾರಾಟ ಮಾಡಬಹುದಾಗಿದೆ ಎಂದು ತಿಳಿಸಿದರು. ಐಸಿಎಆರ್ ಜೆಎಸ್‌ಎಸ್ ಕೃಷಿ ವಿಜ್ಞಾನ ಕೇಂದ್ರದ ಹಿರಿಯ ವಿಜ್ಞಾನಿ ಮತ್ತು ಮುಖ್ಯಸ್ಥರಾದ ಡಾ. ಬಿ.ಎನ್. ಜ್ಞಾನೇಶ್‌ರವರು ರೈತರು ವಿದ್ಯುತ್‌ನಲ್ಲಿ ಸ್ವಾವಲಂಬನೆ ಸಾಧಿಸಲು ಕೃಷಿಯಲ್ಲಿ ಸೌರವಿದ್ಯುತ್ ಬಳಕೆ ಕುರಿತು ಕಾರ್ಯಾಗಾರವನ್ನು ಹಮ್ಮಿಕೊಳ್ಳಲಾಗಿದೆ. ರೈತರು ಈ ಕಾರ್ಯಾಗಾರದ ಸದುಪಯೋಗವನ್ನು ಪಡೆದುಕೊಳ್ಳಬೇಕು ಎಂದು ತಿಳಿಸಿದರು. ಶ್ರೀ ಮಹದೇವಸ್ವಾಮಿ ಪ್ರಾರ್ಥಿಸಿದರು. ಡಾ. ವೈ.ಪಿ. ಪ್ರಸಾದ್ ಸ್ವಾಗತಿಸಿದರು. ಡಾ. ದೀಪಕ್ ವಂದಿಸಿದರು. ಶ್ರೀ ಶಾಮರಾಜ್ ಕಾರ್ಯಕ್ರಮ ನಿರೂಪಿಸಿದರು. ಕಾರ್ಯಾಗಾರದಲ್ಲಿ 80ಕ್ಕೂ ಹೆಚ್ಚು ರೈತರು ಭಾಗವಹಿಸಿದ್ದರು.

## ಶ್ರೀಮತ್ಸುತ್ತೂರು ಗುರುಪರಂಪರೆ ಜ್ಞಾನವೆಂಬ ದಿವ್ಯಾಂಜನ ದೃಷ್ಟಿಯನ್ನು ಕರುಣಿಸುತ್ತಿದೆ



ನಂಜನಗೂಡಿನ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನಲ್ಲಿ ನಡೆದ ಸಾಂಸ್ಕೃತಿಕ ಮತ್ತು ಕ್ರೀಡಾ ವೇದಿಕೆಗಳ ಉದ್ಘಾಟನಾ ಸಮಾರಂಭದಲ್ಲಿ ಡಾ. ಬಿ.ವಿ. ವಸಂತಕುಮಾರ್‌ರವರು ಮಾತನಾಡುತ್ತಿರುವುದು. (29 ಜುಲೈ 2026)

ಶ್ರೀಮತ್ಸುತ್ತೂರು ಗುರುಪರಂಪರೆ ಜ್ಞಾನವೆಂಬ ದಿವ್ಯಾಂಜನ ದೃಷ್ಟಿಯನ್ನು ಕರುಣಿಸುತ್ತಿದೆ ಎಂದು ಕನ್ನಡ ಪ್ರಾಧ್ಯಾಪಕರಾದ ಡಾ. ಬಿ.ವಿ. ವಸಂತಕುಮಾರ್‌ರವರು ಹೇಳಿದರು.

**ನಂಜನಗೂಡಿನ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನಲ್ಲಿ** ದಿನಾಂಕ 29.7.2026ರಂದು ಆಯೋಜಿಸಿದ್ದ 2026–27ನೇ ಶೈಕ್ಷಣಿಕ ಸಾಲಿನ ಸಾಂಸ್ಕೃತಿಕ ಮತ್ತು ಕ್ರೀಡಾ ವೇದಿಕೆಗಳ ಉದ್ಘಾಟನಾ ಸಮಾರಂಭದಲ್ಲಿ ಅವರು ಮಾತನಾಡಿದರು. ಹುಟ್ಟು ನಮ್ಮ ಆಯ್ಕೆಯಲ್ಲ, ಆದರೆ ಬದುಕು ನಮ್ಮ ಆಯ್ಕೆಯಾಗಿದೆ. ಜೀವನದ ಪುಸ್ತಕ ಹಾಗೂ ಪಠ್ಯ ಪುಸ್ತಕಗಳ ನಡುವಿನ ವ್ಯತ್ಯಾಸವನ್ನು ಮನದಟ್ಟು ಮಾಡಿಕೊಳ್ಳಲು ಸಾಂಸ್ಕೃತಿಕ,

ಕ್ರೀಡಾ ಹಾಗೂ ಇತರೆ ಪಠ್ಯಪೂರಕ ಚಟುವಟಿಕೆಗಳು ಅಗತ್ಯ. ಇವು ವಿದ್ಯಾರ್ಥಿಗಳು ತಮ್ಮ ಉತ್ತಮ ವ್ಯಕ್ತಿತ್ವವನ್ನು ರೂಪಿಸಿಕೊಳ್ಳುವಲ್ಲಿ ಸಹಕಾರಿಯಾಗುತ್ತವೆ. ದೇಹ, ಮನಸ್ಸು, ಬುದ್ಧಿ, ಸಂಸ್ಕೃತಿ, ಪ್ರಕೃತಿ ಮುಂತಾದ ವಿಷಯಗಳ ಬಗ್ಗೆ ಅರಿವು ಮೂಡಿಸಿಕೊಳ್ಳುವ ಪ್ರಯತ್ನ ಇಂದಿನ ವಿಜ್ಞಾನ ಜಗತ್ತಿನಲ್ಲಿ ಆಗಬೇಕಾಗಿದೆ. ಶಿಕ್ಷಣವೆಂಬುದು ಕೇವಲ ಪ್ರಮಾಣಪತ್ರ ಪಡೆಯಲಷ್ಟೇ ಆಗದೆ ವ್ಯಕ್ತಿತ್ವ ರೂಪಿಸುವ ಮಾರ್ಗದರ್ಶನದ ಬಾಗಿಲಾಗಬೇಕು ಎಂದು ಹೇಳಿದರು.

ಮೈಸೂರು ವಿಶ್ವವಿದ್ಯಾನಿಲಯದ ಕಿಕ್ ಬಾಕ್ಸಿಂಗ್ ತರಬೇತುದಾರರು ಹಾಗೂ ಅಂತಾರಾಷ್ಟ್ರೀಯ ಕ್ರೀಡಾಪಟುಗಳಾದ ಶ್ರೀ ಎಸ್. ಜಸ್ವಂತ್‌ರವರು ಮಾತನಾಡಿ, ಪಠ್ಯದಂತೆ ಕ್ರೀಡಾ ಚಟುವಟಿಕೆಗಳಲ್ಲೂ ಕೂಡ ವಿದ್ಯಾರ್ಥಿಗಳು ಆಸಕ್ತಿಯನ್ನು ಹೊಂದಬೇಕು. ಒಳಾಂಗಣ ಮತ್ತು ಹೊರಾಂಗಣ ಕ್ರೀಡಾ ಚಟುವಟಿಕೆಗಳಲ್ಲಿ ಭಾಗವಹಿಸಿ ಶರೀರ ಹಾಗೂ ಮಾನಸಿಕ ಸಮತೋಲನವನ್ನು ಕಾಪಾಡಿಕೊಳ್ಳಬೇಕು ಎಂದರು.

ಕಾಲೇಜು ಶಿಕ್ಷಣ ವಿಭಾಗದ ನಿರ್ದೇಶಕರಾದ ಪ್ರೊ. ಮೊರಬದ ಮಲ್ಲಿಕಾರ್ಜುನರವರು ಗುರುಪೂರ್ಣಿಮೆಯ ಶುಭದಿನದಂದು ಆಯೋಜಿಸಿರುವ ಸಾಂಸ್ಕೃತಿಕ ಮತ್ತು ಕ್ರೀಡಾ ವೇದಿಕೆಗಳ ಉದ್ಘಾಟನಾ ಸಮಾರಂಭ ಅರ್ಥಪೂರ್ಣವಾದುದು. ಅರಿವೆಂಬ ಗುರುವಿನ ಆದರ್ಶಗಳನ್ನು ಜ್ಞಾನ ದೀವಿಗೆಯಾಗಿ ಸ್ವೀಕರಿಸಬೇಕು. ವಿದ್ಯಾರ್ಥಿಗಳಲ್ಲಿ ಪ್ರೀತಿ, ವಾತ್ಸಲ್ಯ ಹಾಗೂ ವಿಶ್ವಾಸದಂತಹ ಗುಣಗಳು ಬೆಳೆಯಬೇಕು. ಇಲ್ಲಿ ವ್ಯಾಸಂಗ ಮಾಡುತ್ತಿರುವ ನೀವುಗಳು ಸಾಹಿತ್ಯ, ಸಂಗೀತ, ಕಲೆ, ಕ್ರೀಡೆ ಮುಂತಾದ ಕ್ಷೇತ್ರಗಳಲ್ಲಿ ಸಾಧನೆ ಮಾಡಿ ಶಿಕ್ಷಣ ಸಂಸ್ಥೆಗೆ ಕೀರ್ತಿ ಮತ್ತು ಯಶಸ್ಸನ್ನು ತರಬೇಕು ಎಂದರು.

ಪ್ರಾಂಶುಪಾಲರಾದ ಡಾ. ಸಿ.ಎಸ್. ಹೊನ್ನೇಗೌಡರವರು ಪ್ರತಿಷ್ಠಿತ ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು ಸಾಧನೆಯ ಹಾದಿಯಲ್ಲಿ ಸಾಗಿ ಜೀವನ ಮೌಲ್ಯಗಳನ್ನು ಜೀವಂತವಾಗಿಸಬೇಕೆಂದು ತಿಳಿಸಿದರು.

